ಕರ್ನಾಟಕ ಸರ್ಕಾರ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

**HASSAN INSTITUTE OF MEDICAL SCIENCES, HASSAN**

**(An Autonomous Medical Institution, Government of Karnataka )**

**SRI CHAMARAJENDRA HOSPITAL CAMPUS, HASSAN-573**

**Website: www.hims-hassan.org, Phone/Fax No.08172-231699/ 231599**

**Email: directorhims@yahoo.com**

# 18ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

## ದಿನಾಂಕ:13-06-2014ನೇ ಶುಕ್ರವಾರ, ಪೂವಾಹ್ನ: 10.00

:ಸ್ಥಳ:

ಕೊಠಡಿ ಸಂಖ್ಯೆ:301, 3ನೇ ಮಹಡಿ,

ವಿಧಾನ ಸೌಧ, ಬೆಂಗಳೂರು.

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699/231599 , Email:directorhims@yahoo.com

# 18ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ದಿನಾಂಕ:13-06-2014ರಂದು ಶುಕ್ರವಾರ, ಪೂರ್ವಾಹ್ನ:10-00ಗಂಟೆಗೆ ಸನ್ಮಾನ್ಯ ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ: 301, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು ಇಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 18ನೇ ಆಡಳಿತ ಮಂಡಳಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಆಡಳಿತ ಮಂಡಳಿ ಸದಸ್ಯರ ಸಂಖ್ಯೆ: 08** **ಹಾಜರಿದ್ದ ಸದಸ್ಯರ ಸಂಖ್ಯೆ: 06**

## ಸಭೆಯಲ್ಲಿ ಹಾಜರಿದ್ದ ಗೌರವಾನ್ವಿತ ಸದಸ್ಯರುಗಳು

| | | | |
|---|---|---|---|
| 1 | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ವಿಧಾನ ಸೌಧ, ಬೆಂಗಳೂರು | ಅಧ್ಯಕ್ಷರು | ಹಾಜರಿರುತ್ತಾರೆ |
| 2 | ಸರ್ಕಾರದ ಮಾನ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಉಪಾಧ್ಯಕ್ಷರು | ಹಾಜರಿರುತ್ತಾರೆ |
| 3 | ಮಾನ್ಯ ಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ, ಬೆಂಗಳೂರು. | ಸದಸ್ಯರು | --- |
| 4 | ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 5 | ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 6 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 7 | ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ. | ಸದಸ್ಯರು | --- |
| 8 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td></td><td>ದಿನಾಂಕ:31-07-2013ರಂದು ನಡೆದ 17ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದು.</td><td>ದಿನಾಂಕ:31-07-2013ರಂದು ನಡೆದ 17ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸಲಾಯಿತು.</td></tr>
<tr><td>01</td><td>ದಿನಾಂಕ:18-11-2013 ಮತ್ತು 04-02-2014ರಂದು ನಡೆದ ಮುಂಬಡ್ತಿ ಸಮಿತಿ ಸಭೆಯ ಸಭಾ ನಡವಳಿಗಳನ್ನು ಓದಿ ಅಂಗೀಕರಿಸುವುದು.</td><td>ದಿನಾಂಕ:18-11-2013ರಂದು ನಡೆದ ಮುಂಬಡ್ತಿ ಸಮಿತಿ ಸಭೆಯಲ್ಲಿ ಈ ಕೆಳಕಂಡ ಬೋಧಕ ಸಿಬ್ಬಂದಿಯವರಿಗೆ ಮುಂಬಡ್ತಿ ನೀಡಿರುವುದನ್ನು ಒಪ್ಪಿ ಅನುಮೋದಿಸಲಾಯಿತು.
<table>
<tr><th>ಕ್ರಮ ಸಂ ಖ್ಯೆ</th><th>ಬೋಧಕರ ಹೆಸರು</th><th>ವಿಭಾಗ</th><th>ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಮತ್ತು ವೇತನ ಶ್ರೇಣಿ</th><th>ಪದೋನ್ನತಿ ಬಡ್ತಿ ಹೊಂದಿದ ಹುದ್ದೆ ಮತ್ತು ವೇತನ ಶ್ರೇಣಿ</th></tr>
<tr><td>1</td><td>ಡಾ. ಪ್ರವೀಣ್ .ಜಿ</td><td>ಸಮುದಾಯ ವೈದ್ಯಶಾಸ್ತ್ರ ವಿಭಾಗ</td><td>ಸಹಾಯಕ ಪ್ರಾಧ್ಯಾಪಕರು<br>15600-39100<br>AGP 8000</td><td>ಸಹ ಪ್ರಾಧ್ಯಾಪಕರು<br>37400-67000<br>AGP 9000</td></tr>
</table>
ದಿನಾಂಕ:04-02-2014ರಂದು ನಡೆದ ಮುಂಬಡ್ತಿ ಸಮಿತಿ ಸಭೆಯಲ್ಲಿಈ ಕೆಳಕಂಡ ಬೋಧಕ ಸಿಬ್ಬಂದಿಯವರಿಗೆ ಮುಂಬಡ್ತಿ ನೀಡಿರುವುದನ್ನು ಒಪ್ಪಿ ಅನುಮೋದಿಸಲಾಯಿತು.
<table>
<tr><th>ಕ್ರಮ ಸಂಖ್ಯೆ</th><th>ಬೋಧಕರ ಹೆಸರು</th><th>ವಿಭಾಗ</th><th>ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಮತ್ತು ವೇತನ ಶ್ರೇಣಿ</th><th>ಪದೋನ್ನತಿ ಬಡ್ತಿ ಹೊಂದಿದ ಹುದ್ದೆ ಮತ್ತು ವೇತನ ಶ್ರೇಣಿ</th></tr>
<tr><td>02</td><td>ಡಾ. ಪ್ರಸನ್ನ ಕುಮಾರ್. ಡಿ.ಜಿ</td><td>ಮಕ್ಕಳ ಚಿಕಿತ್ಸಾ ವಿಭಾಗ</td><td>ಸಹ ಪ್ರಾಧ್ಯಾಪಕರು<br>37400-67000<br>AGP 9000</td><td>ಪ್ರಾಧ್ಯಾಪಕರು<br>37400-67000<br>AGP 10000</td></tr>
<tr><td>03</td><td>ಡಾ.ರಾಘವೇಂದ್ರ ಪ್ರಸಾದ್.ಕೆ.ಯು</td><td>ಕಿವಿ, ಮೂಗು ಮತ್ತು ಗಂಟಲು ಚಿಕಿತ್ಸಾ ವಿಭಾಗ</td><td>ಸಹ ಪ್ರಾಧ್ಯಾಪಕರು<br>37400-67000<br>AGP 9000</td><td>ಪ್ರಾಧ್ಯಾಪಕರು<br>37400-67000<br>AGP 10000</td></tr>
<tr><td>04</td><td>ಡಾ.ವಿನಯ್ ಕುಮಾರ್.</td><td>ಕಿವಿ, ಮೂಗು ಮತ್ತು ಗಂಟಲು ಚಿಕಿತ್ಸಾ ವಿಭಾಗ</td><td>ಸಹಾಯಕ ಪ್ರಾಧ್ಯಾಪಕರು<br>15600-39100<br>AGP 8000</td><td>ಸಹ ಪ್ರಾಧ್ಯಾಪಕರು<br>37400-67000<br>AGP 9000</td></tr>
</table>
</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 02 | ಹಿಮ್ಸ್ ಸಂಸ್ಥೆಯ ಬೋಧಕ ಸಿಬ್ಬಂದಿ ವರ್ಗದವರ ಖಾಯಂ ಪೂರ್ವ ಸೇವಾವಧಿಯನ್ನು ಸರ್ಕಾರವು ಘೋಷಿಸಿರುವುದನ್ನು ಅನುಮೋದಿಸುವ ಬಗ್ಗೆ. | ಈ ಕೆಳಕಂಡ ಬೋಧಕ ಸಿಬ್ಬಂದಿಯ ಪರಿವೀಕ್ಷಣಾ ಅವಧಿಯನ್ನು(Probationary) ಅವರ ಹೆಸರಿನ ಮುಂದೆ ನಮೂದಿಸಿರುವಂತೆ 02 ವರ್ಷ ಖಾಯಂ ಪೂರ್ವ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ್ದಾರೆಂದು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ(ವೈ.ಶಿ), ವಿಕಾಸ ಸೌಧ, ಬೆಂಗಳೂರು ಇವರು ಘೋಷಿಸಿರುವುದನ್ನು ಆಡಳಿತ ಮಂಡಳಿ ಸಭೆಯಲ್ಲಿ ಒಪ್ಪಿ ಅನುಮೋದಿಸಲಾಯಿತು. |

| ಕ್ರ ಸಂ | ಬೋಧಕರ ಹೆಸರು | ಪದನಾಮ | ಸೇವೆಗೆ ಸೇರಿದ ದಿನಾಂಕ | ಖಾಯಂ ಪೂರ್ವ ಸೇವಾ ಅವಧಿ ಪೂರ್ಣಗೊಳಿಸಿದ ದಿನಾಂಕ | ತೃಪ್ತಿಕರವಾಗಿದೆಯೆಂದು ಘೋಷಿಸಿರುವ ಸರ್ಕಾರಿಆದೇಶ ಸಂಖ್ಯೆ ಮತ್ತು ದಿನಾಂಕ |
|---|---|---|---|---|---|
| 01 | ಡಾ. ಪ್ರಸನ್ನ ಕುಮಾರ್. ಡಿ.ಜಿ | ಸಹ ಪ್ರಾಧ್ಯಾಪಕರು | 27.11.2009 | 06.09.2012 | ಆಕುಕ 117 ಕೆವಿಎಂ 2013, ದಿನಾಂಕ: 01.08.2013 |
| 02 | ಡಾ.ಜಯಶ್ರೀ ನಾಗರಾಳ | ಸಹಾಯಕ ಪ್ರಾಧ್ಯಾಪಕರು | 01.10.2010 | 30.09.2012 | ಆಕುಕ 125 ಕೆವಿಎಂ 2013, ದಿನಾಂಕ: 11.09.2013 |
| 03 | ಡಾ. ಹರ್ಷ ಬಿ.ಎಸ್. | ಹಿರಿಯ ಸ್ಥಾನಿಯ ವೈದ್ಯರು | 12.05.2011 | 11.05.2013 | ಆಕುಕ 200 ಕೆವಿಎಂ 2013, ದಿನಾಂಕ: 05.10.2013 |
| 04 | ಡಾ. ರವಿ. ಟಿ. ಚಿಕ್ಕಣ್ಣನವರ್ | ಕಿರಿಯ ಸ್ಥಾನಿಯ ವೈದ್ಯರು | 14.07.2006 | 06.09.2012 | ಆಕುಕ 116 ಕೆವಿಎಂ 2013, ದಿನಾಂಕ: 01.08.2013 |
| 05 | ಡಾ. ಸ್ವಪ್ನ ಜಿ.ಎನ್. | ಬೋಧಕರು | 02.04.2006 | 06.09.2012 | ಆಕುಕ 120 ಕೆವಿಎಂ 2013, ದಿನಾಂಕ: 01.08.2013 |
| 06 | ಡಾ. ಚೈತನ್ಯ ಕೃಷ್ಣಮೂರ್ತಿ | ಬೋಧಕರು | 01.06.2006 | 06.09.2012 | ಆಕುಕ 108 ಕೆವಿಎಂ 2013, ದಿನಾಂಕ: 01.08.2013 |
| 07 | ಡಾ. ಸುಧಾ.ವಿ.ಆರ್. | ಬೋಧಕರು | 19.08.2006 | 06.09.2012 | ಆಕುಕ 11 ಕೆವಿಎಂ 2013, ದಿನಾಂಕ: 01.08.2013 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|

| | | | | | |
|---|---|---|---|---|---|
| 08 | ಡಾ. ಪ್ರಶಾಂತ್ ಸ್ವಾಮಿ ಪೂಜಾರ್ | ಕಿರಿಯ ಸ್ಥಾನಿಯ ವೈದ್ಯರು | 15.10.2006 | 06.09.2012 | ಆಕುಕ 109 ಕೆವಿಎಂ. 2013, ದಿನಾಂಕ: 01.08.2013 |

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 03 | (ಅ) ಹಿಮ್ಸ್ ಸಂಸ್ಥೆಯ ಬೋಧಕ ಸಿಬ್ಬಂದಿಯವರ ಪರಿವೀಕ್ಷಣಾ ಅವಧಿಯನ್ನು (Probationary) ಘೋಷಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗದ ಬೋಧಕ ಹುದ್ದೆಗಳಿಗೆ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ವೈದ್ಯರುಗಳ ಖಾಯಂ ಪೂರ್ವ ಸೇವಾವಧಿ ಘೋಷಿಸಲು ಸರ್ಕಾರದ ಮಾನ್ಯ ಕಾರ್ಯದರ್ಶಿಗಳು(ವೈ.ಶಿ), ಬೆಂಗಳೂರು ಇವರು ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಕ್ರಮವಹಿಸಲು ಸೂಚಿಸಿರುವುದರಿಂದ ವಿಷಯವನ್ನು ಕೂಲಂಕುವಾಗಿ ಚರ್ಚಿಸಿ ಈ ಕೆಳಕಂಡ ಬೋಧಕರು 02 ವರ್ಷ ಖಾಯಂ ಪೂರ್ವ ಸೇವಾವಧಿ ತೃಪ್ತಿಕರವಾಗಿ ಪೂರೈಸಿರುವುದರಿಂದ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |

| ಕ್ರಮ ಸಂಖ್ಯೆ | ಬೋಧಕರ ಹೆಸರು | ಪದನಾಮ | ಸೇವೆಗೆ ಸೇರಿದ ದಿನಾಂಕ | ಖಾಯಂ ಪೂರ್ವ ಸೇವಾ ಅವಧಿ ಪೂರ್ಣಗೊಳಿಸಿದ ದಿನಾಂಕ |
|---|---|---|---|---|
| 01 | ಡಾ.ಸುಮನ .ಎಂ.<br>ಸಮುದಾಯ ವೈದ್ಯಶಾಸ್ತ್ರ ವಿಭಾಗ | ಸಹಾಯಕ ಪ್ರಾಧ್ಯಾಪಕರು | 27.12.2010 | 26.12.2012 |
| 02 | ಡಾ.ಧರಣೇಶ್.ಎಸ್.ಸಿ.<br>ಅರವಳಿಕೆ ವಿಭಾಗ | ಹಿರಿಯ ಸ್ಥಾನಿಯ ವೈದ್ಯರು | 01.10.2010 | 30.09.2012 |
| 03 | ಡಾ.ಕುಮಾರ್.ಎಸ್.ಆರ್.<br>ಮಕ್ಕಳ ಚಿಕಿತ್ಸ ವಿಭಾಗ | ಹಿರಿಯ ಸ್ಥಾನಿಯ ವೈದ್ಯರು | 28.12.2011 | 27.12.2013 |
| 04 | ಡಾ.ಹರೀಶ್.ಹೆಚ್. ಎನ್<br>ಮಕ್ಕಳ ಚಿಕಿತ್ಸಾ ವಿಭಾಗ | ಹಿರಿಯ ಸ್ಥಾನಿಯ ವೈದ್ಯರು | 28.12.2011 | 27.12.2013 |
| 05 | ಡಾ.ಹರ್ಷವರ್ಧನ್.ಎಲ್.<br>ವೈದ್ಯಶಾಸ್ತ್ರ ವಿಭಾಗ | ಸಹಾಯಕ ಪ್ರಾಧ್ಯಾಪಕರು | 27.01.2012 | 26.01.2014 |
| 06 | ಡಾ.ಶ್ರೀನಿವಾಸ್.ಬಿ.ಎಸ್.<br>ಮಕ್ಕಳ ಚಿಕಿತ್ಸಾ ವಿಭಾಗ | ಸಹಾಯಕ ಪ್ರಾಧ್ಯಾಪಕರು | 30.01.2012 | 29.01.2014 |
| 07 | ಡಾ.ಸೌಮ್ಯಟಿ.ಎಸ್.<br>ರೋಗಲಕ್ಷಣಶಾಸ್ತ್ರ ವಿಭಾಗ | ಸಹಾಯಕ ಪ್ರಾಧ್ಯಾಪಕರು | 27.01.2012 | 26.01.2014 |
| 08 | ಡಾ. ಶ್ರೀಲತ ಸಿ.ವೈ.<br>ಸಮುದಾಯ ವೈದ್ಯಶಾಸ್ತ್ರ ವಿಭಾಗ | ಸಹಾಯಕ ಪ್ರಾಧ್ಯಾಪಕರು | 02.02.2012 | 01.02.2014 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಆ) ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನದಲ್ಲಿ ನೇಮಕಗೊಂಡಿರುವ ಬೋಧಕೇತರ ಸಿಬ್ಬಂದಿಗಳ ಪರಿವೀಕ್ಷಣಾ ಅವಧಿಯನ್ನು ಘೋಷಣೆ ಮಾಡಿರುವುದನ್ನು ಅನುಮೋದಿಸುವ ಬಗ್ಗೆ.</td><td>
<table>
<tr><td>09</td><td>ಡಾ.ಭಾಗ್ಯಶ್ರೀ ಅಮೀಗಡ್<br>ಅರವಳಿಕೆ ವಿಭಾಗ</td><td>ಸಹಾಯಕ ಪ್ರಾಧ್ಯಾಪಕರು</td><td>09.02.2012</td><td>08.02.2014</td></tr>
<tr><td>11</td><td>ಡಾ. ಅಂಜನ್ ಶ್ರೀರಂಗ<br>ಸಮುದಾಯ ವೈದ್ಯ ಶಾಸ್ತ್ರ ವಿಭಾಗ</td><td>ಬೋಧಕರು</td><td>04.05.2006</td><td>30.06.2013</td></tr>
<tr><td>12</td><td>ಡಾ. ರಘುಪತಿ.ಕೆ<br>ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗ</td><td>ಹಿರಿಯ ಸ್ಥಾನಿಯ ವೈದ್ಯರು</td><td>28.12.2011</td><td>27.12.2013</td></tr>
</table>
ಈ ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ತರದೆ ಹಿಂಪಡೆಯಲಾಗಿದೆ.</td></tr>
<tr><td>04</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಖಾಲಿ ಇರುವ ಶುಶ್ರೂಷಕ ಹುದ್ದೆಗಳನ್ನು ಭರ್ತಿ ಮಾಡಲು ನೇರ ಸಂದರ್ಶನ ಮಾಡಲುಅನುಮತಿ ಕೋರಿ.</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ 126 ಶುಶ್ರೂಷಕ ಹುದ್ದೆಗಳು ಖಾಲಿ ಇದ್ದು ಅತಿ ಶೀಘ್ರದಲ್ಲಿ ಹೊಸ ಆಸ್ಪತ್ರೆ ಕಟ್ಟಡ ಪ್ರಾರಂಭವಾಗುತ್ತಿರುವುದರಿಂದ ಶುಶ್ರೂಷಕರ ಕೊರತೆ ಇದ್ದು ಹೊಸ ಆಸ್ಪತ್ರೆ ಕಟ್ಟಡ ಪ್ರಾರಂಭಿಸುವುದರೊಳಗೆ ಖಾಲಿ ಇರುವ ಶುಶ್ರೂಷಕ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಅನುಮತಿ ನೀಡಬೇಕೆಂದು ನಿರ್ದೇಶಕರು ಸಭೆಯ ಮುಂದೆ ವಿಷಯವನ್ನು ಮಂಡಿಸಿದರು ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಸರ್ಕಾರದ ಆರ್ಥಿಕ ಇಲಾಖೆಯ ಸಹಮತಿಗೆ ಪ್ರಸ್ತಾವನೆಯನ್ನು ನಿಗದಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು.</td></tr>
<tr><td>05</td><td>ಡಾ.ಸತೀಶ್ ಬಾಬು ಎನ್. ಹಿರಿಯ ಸ್ಥಾನಿಯ ವೈದ್ಯರು ಇವರು ರಾಜೀನಾಮೆ ನೀಡಿರುವ ಬಗ್ಗೆ ಚರ್ಚೆ ಹಾಗೂ ತೀರ್ಮಾನ</td><td>ಡಾ. ಸತೀಶ್ ಬಾಬು ಎನ್. ಇವರು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ದಿನಾಂಕ: 03-07-2006 ರಂದು ಹಿರಿಯ ಸ್ಥಾನಿಯ ವೈದ್ಯರಾಗಿ ಕಿವಿ, ಮೂಗು ಮತ್ತು ಗಂಟಲು ವಿಭಾಗಕ್ಕೆ ನೇಮಕಾತಿ ಹೊಂದಿದ್ದು, ನಂತರ ಸೇವಾ ನಿರತ ಕೋಟಾದಡಿ ಸ್ನಾತ್ತಕೋತ್ತರ ಪದವಿಗೆ ಆಯ್ಕೆಯಾಗಿ ದಿನಾಂಕ: 02-06-2010ರಂದು ಸಂಸ್ಥೆಯಿಂದ ಬಿಡುಗಡೆ ಹೊಂದಿ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನ ಸಂಸ್ಥೆಯಲ್ಲಿ ಶಸ್ತ್ರ ಚಿಕಿತ್ಸಾ ವಿಭಾಗದ ಸ್ನಾತ್ತಕೋತ್ತರ ಪದವಿಗೆ ನಿಯೋಜಿತರಾಗಿರುತ್ತಾರೆ. ವ್ಯಾಸಂಗದ ಅವಧಿಯಲ್ಲಿ ಸಂಸ್ಥೆಯಿಂದ ವೇತನ ಮತ್ತು ಎಲ್ಲಾ ರೀತಿಯ ಆರ್ಥಿಕ ಸೌಲಭ್ಯಗಳನ್ನು ಪಡೆದುಕೊಂಡಿರುತ್ತಾರೆ. ತಮ್ಮ ಸ್ನಾತ್ತಕೋತ್ತರ ಪದವಿಯನ್ನು ಮುಗಿಸಿ ದಿನಾಂಕ:23-05-2013ರಂದು ಸಂಸ್ಥೆಗೆ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ ನಂತರ ಈ ಸಂಸ್ಥೆಯಲ್ಲಿ ಸೇವೆ ಮುಂದುವರೆಸಲು ಸಾಧ್ಯವಿಲ್ಲವೆಂದು ಕಾರಣ ನೀಡಿ</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
| --- | --- | --- |
| | | ದಿನಾಂಕ:26-06-2013ರಂದು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿ ದಂಡದ ರೂಪದಲ್ಲಿ ರೂ.5.00 ಲಕ್ಷಗಳಿಗೆ ಚೆಕ್ ನೀಡಿರುತ್ತಾರೆ. ಸಂಸ್ಥೆಯ ಆಡಳಿತ ಮಂಡಳಿ ಸಭೆಯಲಿ ಡಾ.ಸತೀಶ್ ಬಾಬುರವರು ರಾಜೀನಾಮೆಯು ಅಂಗೀಕಾರ ಆಗದೇ ಇರುವುದರಿಂದ ಇವರ ರಾಜೀನಾಮೆ ಪತ್ರವನ್ನು ಅಂಗೀಕರಿಸಿರುವುದಿಲ್ಲ. ಸಂಸ್ಥೆಯಿಂದ ಬಿಡುಗಡೆ ಪತ್ರ ಪಡೆಯದೆ ಕರ್ತವ್ಯಕ್ಕೆ ಗೈರು ಹಾಜರಾಗಿರುವುದರಿಂದ ಡಾ.ಸತೀಶ್ ಬಾಬುರವರವರಿಗೆ ನೋಟೀಸ್ ಜಾರಿಗೊಳಿಸಿದ್ದು, ಇವರೆಗೆ ಯಾವುದೇ ಉತ್ತರ ನೀಡಿರುವುದಿಲ್ಲ ಮತ್ತು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಸರ್ಕಾರದಿಂದ ಎಲ್ಲಾ ರೀತಿಯ ಆರ್ಥಿಕ ಹಾಗೂ ಶೈಕ್ಷಣಿಕ ಲಾಭಗಳನ್ನು ಪಡೆದುಕೊಂಡು ಸಾರ್ವಜನಿಕ ರೋಗಿಗಳ ಹಿತಾಸಕ್ತಿಯನ್ನು ಪರಿಗಣಿಸದೆ ಇರುವುದು ಮತ್ತು ಸರ್ಕಾರದ ಅನುಮತಿ ಪಡೆಯದೆ ಅನಧಿಕೃತ ಗೈರು ಹಾಜರಾಗಿ ರಾಜೀನಾಮೆ ಪತ್ರ ಸಲ್ಲಿಸಿರುವುದರಿಂದ ಸಂಸ್ಥೆಯ ವಕೀಲರ ಅಭಿಪ್ರಾಯ ಪಡೆದು ಸದರಿ ವೈದ್ಯರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ತೆಗೆದುಕೊಂಡಿರುವ ಕ್ರಮದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ<br>ಅ)ಡಾ. ಸತೀಶ್ ಬಾಬುರವರು ನಿಯಮಾನುಸಾರ ಸಂಸ್ಥೆಯಿಂದ ಬಿಡುಗಡೆಗೊಳ್ಳದೆ ಅನಧಿಕೃತವಾಗಿ ಗೈರು ಹಾಜರಾಗಿ ಸಂಸ್ಥೆಯ ಮತ್ತು ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಸದರಿಯವರು ಹಾಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ಮುಖ್ಯಸ್ಥರಿಗೆ ಪತ್ರ ಬರೆಯುವುದು. ಹಾಗೂ ಡಾ. ಸತೀಶ್‌ಬಾಬು ರವರನ್ನು ತತ್‌ಕ್ಷಣ ಕರ್ತವ್ಯದಿಂದ ಬಿಡುಗಡೆ ಮಾಡಿ ಈ ಸಂಸ್ಥೆಗೆ ವರದಿ ಮಾಡಲು ಸೂಚನೆ ನೀಡಲು ತಿಳಿಸುವುದು, ತಪ್ಪಿದಲ್ಲಿ ಸಂಸ್ಥೆಯ ವಿರುದ್ಧ ಕ್ರಿಮಿನಲ್ ವ್ಯಾಜ್ಯಾ ಹೂಡುವುದು.<br>ಆ) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ತುಮಕೂರು ಇವರಿಗೆ ಪತ್ರ ಬರೆದು ಡಾ. ಸತೀಶ್ ಬಾಬುರವರು ಕರ್ತವ್ಯ ನಿರ್ವಹಿಸುತ್ತಿರುವ ಸಂಸ್ಥೆಗೆ ಪತ್ರ ಬರೆದು ಸದರಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರುವುದು. ತಪ್ಪಿದ್ದಲ್ಲಿ ನಿಯಮಾವಳಿಗಳ ಪ್ರಕಾರ ಸಂಬಂಧಿಸಿದ ಸಂಸ್ಥೆಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕೋರುವುದು.<br>ಇ)ಡಾ. ಸತೀಶ್ ಬಾಬುರವರು ಸರ್ಕಾರಕ್ಕೆ ವಂಚಿಸಿರುವುದರಿಂದ ಕೆ.ಎಮ್.ಸಿ. ಬೆಂಗಳೂರು ಇವರಿಗೆ ಪತ್ರ ಬರೆದು ಡಾ. ಸತೀಶ್‌ಬಾಬುರವರ ನೊಂದಾಣಿಯನ್ನು ರದ್ದು ಪಡಿಸುವಂತೆ ಕ್ರಮ ಕೈಗೊಳ್ಳಲು ಪತ್ರದಲ್ಲಿ ಕೋರುವುದು ಮತ್ತು ಇವರ ನೋಂದಾವಣಿಯನ್ನು ರದ್ದು ಪಡಿಸಲು ಸಹ ಕೋರುವುದು.<br>ಈ) ಡಾ. ಸತೀಶ್ ಬಾಬುರವರು ಸರ್ಕಾರಕ್ಕೆ ವಂಚಿಸಿರುವುದರಿಂದ ನಗರದ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಕೇಸ್ ದಾಖಲಿಸಲು ಕ್ರಮ ಕೈಗೊಳ್ಳುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. |
| 06 | ಡಾ.ವಿನಯ್.ಕೆ.ಎನ್. ಹಿರಿಯ ಸ್ಥಾನಿಯ ವೈದ್ಯರು ಇವರನ್ನು ಉಪನ್ಯಾಸಕರನ್ನಾಗಿ ಪದನಾಮಪರಿವರ್ತನೆ ಮಾಡಿರುವುದನ್ನು | ಡಾ.ವಿನಯ್.ಕೆ.ಎನ್. ಹಿರಿಯ ಸ್ಥಾನಿಯ ವೈದ್ಯರು ಇವರ ಹುದ್ದೆಯ ಪದನಾಮವನ್ನು ಉಪನ್ಯಾಸಕರನ್ನಾಗಿ ಪರಿವರ್ತನೆ ಮಾಡಿರುವುದನ್ನು ಅನುಮೋದಿಸುವ ಬಗ್ಗೆ ಸಭೆಯಲ್ಲಿ ಕೂಲಂಕುವಾಗಿ ಚರ್ಚಿಸಲಾಯಿತು. ಈ ವಿಷಯವನ್ನು ಸಂಸ್ಥೆಯ ಡಿಪಿಸಿ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಂಡು ಮುಂದಿನ ಆಡಳಿತ ಮಂಡಳಿ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | ಅನುಮೋದಿಸುವ ಬಗ್ಗೆ. | ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 07 | ಡಾ. ಮನೋಹರ್.ಎಸ್.ಆರ್. ಹಿರಿಯ ಸ್ಥಾನಿಯ ವೈದ್ಯರು ಇವರನ್ನು ಉಪನ್ಯಾಸಕರನ್ನಾಗಿ ಪದನಾಮ ಪರಿವರ್ತನೆ ಮಾಡಿರುವುದನ್ನು ಅನುಮೋದಿಸುವ ಬಗ್ಗೆ. | ಡಾ. ಮನೋಹರ್.ಎಸ್.ಆರ್. ಹಿರಿಯ ಸ್ಥಾನಿಯ ವೈದ್ಯರು ಇವರ ಹುದ್ದೆಯ ಪದನಾಮವನ್ನು ಉಪನ್ಯಾಸಕರನ್ನಾಗಿ ಪರಿವರ್ತನೆ ಮಾಡಿರುವುದನ್ನು ಅನುಮೋದಿಸುವ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಈ ವಿಷಯವನ್ನು ಸಂಸ್ಥೆಯ ಡಿಪಿಸಿ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಂಡು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 08 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಸಿಬ್ಬಂದಿಗಳು ಉನ್ನತ ವ್ಯಾಸಂಗಕ್ಕಾಗಿ ತೆರಳಿದ್ದು, ಅವರ ವೇತನ ಮತ್ತು ಭತ್ಯೆಗಳನ್ನು ಪಾವತಿಸಲು ಸರ್ಕಾರವು ಸಂಸ್ಥೆಯ ಹಂತದಲ್ಲೇ ತೀರ್ಮಾನಿಸಲು ನೀಡಿರುವ ಸೂಚನೆಯಂತೆ ಆಡಳಿತ ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ. | ಡಾ. ನಿರಂಜನ್.ಎಮ್.ಆರ್., ಸಹಾಯಕ ಪ್ರಾಧ್ಯಾಪಕರು ವೈದ್ಯಶಾಸ್ತ್ರ ವಿಭಾಗ, ಹಿಮ್ಸ್, ಹಾಸನ ಇವರು ಸೇವಾ ನಿರತ ಕೋಟಾದಡಿ DM Nephrourology Super Speciality ವ್ಯಾಸಂಗಕ್ಕೆ Institute of Nephrourology, Victoria Hospital Campus, Bangalore ಇಲ್ಲಿಗೆ ನಿಯೋಜನೆ ಹೊಂದಿದ್ದು, ವ್ಯಾಸಂಗ ಅವಧಿಯ ವೇತನ ಮತ್ತು ಭತ್ಯೆಗಳನ್ನು ಪಾವತಿಸಲು ಸಂಸ್ಥೆಯ ಹಂತದಲ್ಲೇ ಕ್ರಮವಹಿಸಿ ವೇತನ ಬಿಡುಗಡೆ ಮಾಡುವಂತೆ ಸರ್ಕಾರದ ಪತ್ರ ಸಂಖ್ಯೆ: ಆಕುಕ 217 ಕೆವಿಎಂ 2013ರ ಪತ್ರದ ಆದೇಶದಂತೆ ಸದರಿ ವೈದ್ಯರಿಗೆ ವೇತನ ಮತ್ತು ಭತ್ಯೆಗಳನ್ನು ನಿಯಮಾನುಸಾರ ಪಾವತಿಸುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 09 | ಡಾ.ಹೆಚ್.ಸಿ.ಲೋಕೇಶ್, ಇವರನ್ನು ಖಾಯಂ ಹಿರಿಯ ಸ್ಥಾನಿಯ ವೈದ್ಯರು/ ಉಪನ್ಯಾಸಕರ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ. | ಡಾ.ಹೆಚ್.ಸಿ.ಲೋಕೇಶ್, ಇವರು ದಿನಾಂಕ: 17-05-2007ರಂದು ಹಿರಿಯ ಸ್ಥಾನಿಯ ವೈದ್ಯರಾಗಿ ನೇಮಕಾತಿಗೊಂಡಿರುವ ಬಗ್ಗೆ ಹಿರಿಯ ಸ್ಥಾನಿಯ ವೈದ್ಯರು/ ಉಪನ್ಯಾಸಕರೆಂದು ಖಾಯಂಗೊಳಿಸುವುದರ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು ಈ ವಿಷಯವನ್ನು ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯ ಮುಂದೆ ಮಂಡಿಸಿ ಆ ಸಭೆಯ ತೀರ್ಮಾನದಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು. |
| 10 | ಡಾ. ಸುಧಾ.ಟಿ.ಆರ್., ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗ, ಹಿಮ್ಸ್, ಹಾಸನ ಇವರ ದೋಷಾರೋಪಣೆಯ ಬಗ್ಗೆ ವಿಚಾರಣೆ ನಡೆಸಲು ನಿವೃತ್ತ ನ್ಯಾಯಾಧೀಶರನ್ನು ಸರ್ಕಾರದ ಆದೇಶದಂತೆ ವಿಚಾರಣಾಧಿಕಾರಿಯಾಗಿ ನೇಮಕ ಮಾಡಿರುವುದನ್ನು ಅನುಮೋದಿಸುವುದು ಹಾಗೂ | ಡಾ.ಸುಧಾ.ಟಿ.ಆರ್. ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗ, ಹಿಮ್ಸ್, ಹಾಸನ ಇವರ ದೋಷಾರೋಪಣೆಯ ಬಗ್ಗೆ ವಿಚಾರಣೆ ನಡೆಸಲು ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 107 ಕೆವಿಎಂ 2013, ದಿನಾಂಕ: 02-01-2014ರ ಪತ್ರದಲ್ಲಿ ಸೂಚಿಸಿರುವಂತೆ ಮಾನ್ಯ ಶ್ರೀ ಹೆಚ್.ಡಿ. ರಾಮಚಂದ್ರ ರಾವ್, ನಿವೃತ್ತ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯಾಗಿ ಈ ಕಛೇರಿ ಪತ್ರ ಸಂಖ್ಯೆ: ಹಿಮ್ಸ್ /ಸಿ(1) /125/2013-14, ದಿನಾಂಕ: 05-02-2014ರನ್ವಯ ನೇಮಕ ಮಾಡಿಕೊಂಡಿದ್ದು, ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 06 ಸೇಇವಿ2010, ದಿನಾಂಕ:28-04-2011ರ ಆದೇಶದಲ್ಲಿರುವಂತೆಯೇ ಮಾನ್ಯ ಶ್ರೀ ಹೆಚ್.ಡಿ. ರಾಮಚಂದ್ರ ರಾವ್, ನಿವೃತ್ತ ನ್ಯಾಯಾಧೀಶರು, ಬೆಂಗಳೂರು ಇವರಿಗೆ ಆಡಳಿತ ಮಂಡಳಿಯ ಘಟನೋತ್ತರ ನಿರೀಕ್ಷಣೆಯ ಮೇರೆಗೆ ಒಟ್ಟು ರೂ.60,000ಗಳ ಸಂಭಾವನೆಯನ್ನು ಪಾವತಿಸಿರುವುದನ್ನು ಒಪ್ಪಿ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td></td><td>ವಿಚಾರಣಾಧಿಕಾರಿಗಳಿಗೆ ನಿಯಮಾನುಸಾರ ಸಂಭಾವನೆ ನೀಡಲು ಅನುಮತಿ ಕೋರಿರುವ ಬಗ್ಗೆ.</td><td>ಅನುಮೋದಿಸಲಾಯಿತು.</td></tr>
<tr><td>11</td><td>ಶ್ರೀ ಶ್ಯಾಮರಾಜ ಉಡುಪ, ಸಹಾಯಕ ಪ್ರಾಧ್ಯಾಪಕರು, ಜೀವ ರಸಾಯನಶಾಸ್ತ್ರ ವಿಭಾಗ, ಇವರನ್ನು ಪಿ.ಹೆಚ್.ಡಿ. ವ್ಯಾಸಂಗಕ್ಕೆ ಕಳುಹಿಸುವ ಬಗ್ಗೆ.</td><td>ಶ್ರೀ ಶ್ಯಾಮರಾಜ ಉಡುಪ, ಸಹಾಯಕ ಪ್ರಾಧ್ಯಾಪಕರು, ಜೀವ ರಸಾಯನ ಶಾಸ್ತ್ರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಸದರಿಯವರನ್ನು ಪಿ.ಹೆಚ್.ಡಿ.ವ್ಯಾಸಂಗಕ್ಕೆ ಕಳುಹಿಸುವ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಘನ ನ್ಯಾಯಾಲಯದಲ್ಲಿ ಆದೇಶಿಸಿರುವಂತೆ ವೇತನ ರಹಿತ ರಜೆ ಮಂಜೂರು ಮಾಡಿ ಯಾವುದೇ ಆರ್ಥಿಕ ಸೌಲಭ್ಯ ನೀಡದೆ ಕೆ.ಸಿ.ಎಸ್.ಆರ್. ನಿಯಮ ಪರಿಶಿಷ್ಟ 2ಎ ನಿಯಮ 4, 5 ಮತ್ತು 10ರ ನಿಯಮಗಳಡಿಯಲ್ಲಿ ಅರ್ಹತೆ ಇದ್ದಲ್ಲಿ ಮಾತ್ರ ಕಳುಹಿಸಬಹುದೆಂದು ತೀರ್ಮಾನಿಸಲಾಯಿತು.</td></tr>
<tr><td>12</td><td>ಸಂಸ್ಥೆಯಲ್ಲಿ ನಿರಂತರ 05 ವರ್ಷ ಸೇವೆ ಸಲ್ಲಿಸಿ, ರಾಜೀನಾಮೆ ನೀಡುವ ಮರಣ ಹೊಂದುವ ಹಾಗೂ ನಿವೃತ್ತಿ ಹೊಂದುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಗೆ The Payment of Gratuity (Central) Act 1972ರ ಪ್ರಕಾರ ಉಪಾದಾನ ಸೌಲಭ್ಯವನ್ನು ಜಾರಿಗೊಳಿಸುವ ಬಗ್ಗೆ.</td><td>ಸಂಸ್ಥೆಯಲ್ಲಿ ನಿರಂತರ 05 ವರ್ಷ ಸೇವೆ ಸಲ್ಲಿಸಿ, ರಾಜೀನಾಮೆ ನೀಡುವ ಮರಣ ಹೊಂದುವ ಹಾಗೂ ನಿವೃತ್ತಿ ಹೊಂದುವ ಬೋಧಕ ಮತ್ತು ಬೋಧಕೇತರ ವರ್ಗದವರಿಗೆ The Payment of Gratuity (Central) Act 1972ರ ಮತ್ತು ಕೆ.ಸಿ.ಎಸ್.ಆರ್. 1958 ನಿಯಮ 292ರ ಪ್ರಕಾರ ಉಪಾದಾನ ಸೌಲಭ್ಯವನ್ನು ಜಾರಿಗೊಳಿಸುವ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಸದರಿ ಪ್ರಕರಣವು ಈ ಕಾಲೇಜಿಗೆ ಮಾತ್ರ ಸಿಮೀತವಾಗದೆ ಎಲ್ಲಾ ಸ್ವಾಯತ್ತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅನ್ವಯವಾಗುವುದರಿಂದ ಈ ಬಗ್ಗೆ ಆಯಾ ಸಂಸ್ಥೆಗಳ ನಿರ್ದೇಶಕರುಗಳು ಮತ್ತು ಡಿ.ಎಮ್.ಇ.ಯವರನ್ನು ಒಳಗೊಂಡಂತೆ ಟ್ರಸ್ಟ್ ರಚನೆ ಮಾಡಿ ಟ್ರಸ್ಟ್‌ನ ಸದಸ್ಯರು ಸೂಚಿಸುವ ಏಕರೂಪ ನಿಯಮಗಳನುಗುಣವಾಗಿ ಉಪಾದಾನ ಪಾವತಿಗೆ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು.</td></tr>
<tr><td>13</td><td>2013–14ನೇ ಸಾಲಿನಲ್ಲಿ ಬೋಧಕ ಸಿಬ್ಬಂದಿ ವರ್ಗದವರು ವಿದೇಶ ಪ್ರವಾಸ ಕೈಗೊಂಡಿರುವುದನ್ನು ಅನುಮೋದಿಸುವ ಬಗ್ಗೆ.</td><td>2013–14ನೇ ಸಾಲಿನಲ್ಲಿ ಈ ಕೆಳಕಂಡ ಬೋಧಕ ಸಿಬ್ಬಂದಿ ವರ್ಗದವರು ವಿದೇಶ ಪ್ರವಾಸ ಕೈಗೊಳ್ಳಲು ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ), ಬೆಂಗಳೂರು ಇವರಿಂದ ಅನುಮತಿ ಪಡೆದು ಅವರ ಸ್ವಂತ ಹಣದ ಖರ್ಚು ಭರಿಸಿ ವಿದೇಶ ಪ್ರವಾಸ ಕೈಗೊಂಡಿರುವುದನ್ನು ಒಪ್ಪಿ ಅನುಮೋದಿಸಲಾಯಿತು.
<table>
<tr><th>ಕ್ರಮ ಸಂಖ್ಯೆ</th><th>ಬೋಧಕ ಹೆಸರು ಮತ್ತು ಪದನಾಮ</th><th>ಪ್ರವಾಸ ಸ್ಥಳ</th><th>ಪ್ರವಾಸದ ಅವಧಿ</th><th>ಸರ್ಕಾರದ ಅನುಮತಿ ಆದೇಶದ ಸಂಖ್ಯೆ ಮತ್ತು ದಿನಾಂಕ:</th></tr>
<tr><td>01</td><td>ಡಾ.ಹೆಚ್.ಕೆ. ರಾಜಶೇಖರ್, ಸಹ ಪ್ರಾಧ್ಯಾಪಕರು,</td><td>ಕೆನಡಾ ಮತ್ತು ಯು.ಎಸ್.ಎ.</td><td>01.07.2013 ರಿಂದ 18.08.2013</td><td>ಸಂಖ್ಯೆ:ಆಕುಕ 147 ಕೆವಿಎಂ 2013, ದಿನಾಂಕ:23.07.2013</td></tr>
</table></td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | <table><tr><td>02</td><td>ಡಾ.ರವಿಕುಮಾರ್. ಬಿ.ಸಿ. ಪ್ರಾಧ್ಯಾಪಕರು</td><td>ದುಬೈ</td><td>26.01.2014 ರಿಂದ 30.01.2014</td><td>ಸಂಖ್ಯೆ:ಆಕುಕ 300 ಕೆವಿಎಂ 2013, ದಿನಾಂಕ: 24.01.2014</td></tr></table> |
| 14 | ಸಂಸ್ಥೆಯ ಸಮುದಾಯ ವೈದ್ಯಶಾಸ್ತ್ರ ವಿಭಾಗದ ಅಧೀನದಲ್ಲಿರುವ, ಗ್ರಾಮೀಣ ಆರೋಗ್ಯ ತರಬೇತಿ ಕೇಂದ್ರ (RHTC) ಹಾಗೂ ನಗರ ಆರೋಗ್ಯ ತರಬೇತಿ ಕೇಂದ್ರ (UHTC) ದಲ್ಲಿನ ಆರೋಗ್ಯ ವೈದ್ಯಾಧಿಕಾರಿ –ಕಮ್ – ಉಪನ್ಯಾಸಕರು ಎಂಬ 02 ಹುದ್ದೆಯನ್ನು ಎಮ್.ಸಿ.ಐ. ನಿಯಮಾವಳಿಗಳ ಪ್ರಕಾರ ಆರೋಗ್ಯ ವೈದ್ಯಾಧಿಕಾರಿಗಳು –ಕಮ್– ಸಹಾಯಕ ಪ್ರಾಧ್ಯಾಪಕರು ಎಂದು ಪುನರ್ ಪದನಾಮಕರಣ ಮಾಡುವ ಬಗ್ಗೆ. | ಸಂಸ್ಥೆಯ ಸಮುದಾಯ ವೈದ್ಯಶಾಸ್ತ್ರ ವಿಭಾಗದ ಅಧೀನದಲ್ಲಿರುವ, ಗ್ರಾಮೀಣ ಆರೋಗ್ಯ ತರಬೇತಿ ಕೇಂದ್ರ (RHTC) ಹಾಗೂ ನಗರ ಆರೋಗ್ಯ ತರಬೇತಿ ಕೇಂದ್ರ (UHTC) ದಲ್ಲಿನ ಆರೋಗ್ಯ ವೈದ್ಯಾಧಿಕಾರಿ–ಕಮ್–ಉಪನ್ಯಾಸಕರು ಎಂಬ 02 ಹುದ್ದೆಯನ್ನು ಎಮ್.ಸಿ.ಐ. ನಿಯಮಾವಳಿಗಳ ಪ್ರಕಾರ ಆರೋಗ್ಯ ವೈದ್ಯಾಧಿಕಾರಿಗಳು–ಕಮ್ –ಸಹಾಯಕ ಪ್ರಾಧ್ಯಾಪಕರು ಎಂದು ಪುನರ್ ಪದನಾಮಕರಣ ಮಾಡುವ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಸರ್ಕಾರಕ್ಕೆ ಸೂಕ್ತವಾದ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಯಿತು. |
| 15 | ಸಂಸ್ಥೆಯಲ್ಲಿ ಖಾಯಂ ಬೋಧಕರಾಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ವೇತನ ಪುನರ್ ನಿಗದಿ ಮಾಡಲಾಗಿರುತ್ತದೆ. ಇವರುಗಳು ಸೇವೆಗೆ ಸೇರಿದ ದಿನಾಂಕದಿಂದ ಬಾಕಿ ಇರುವ (Arrears) ಮೊತ್ತವನ್ನು ಸಂಬಂಧಪಟ್ಟ ಸಿಬ್ಬಂದಿಗಳಿಗೆ ಬಿಡುಗಡೆ ಮಾಡುವ ಬಗ್ಗೆ. | ಸಂಸ್ಥೆಯಲ್ಲಿ ಖಾಯಂ ಬೋಧಕರಾಗಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳು ಸೇವೆಗೆ ಸೇರಿದ ದಿನಾಂಕದಿಂದ ಬಾಕಿ ಇರುವ (Arrears) ಮೊತ್ತವನ್ನು ಸಂಬಂಧಪಟ್ಟ ಸಿಬ್ಬಂದಿಗಳಿಗೆ ಬಿಡುಗಡೆ ಮಾಡುವ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸದರಿ ವಿಷಯವನ್ನು ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಂಡು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 16 | ಈ ಸಂಸ್ಥೆಯು ನೂತನವಾಗಿ ಪ್ರಾರಂಭಗೊಂಡಾಗ ದಿನಾಂಕ:01–06–2007ರ ಪೂರ್ವದಲ್ಲಿ ಹಿರಿಯ | ಈ ಸಂಸ್ಥೆಯು ನೂತನವಾಗಿ ಪ್ರಾರಂಭಗೊಂಡಾಗ ದಿನಾಂಕ:01–06–2007ರ ಪೂರ್ವದಲ್ಲಿ ಹಿರಿಯ ಸ್ಥಾನಿಯ ವೈದ್ಯರು / ಉಪನ್ಯಾಸಕರಾಗಿ ನೇಮಕ ಹೊಂದಿದವರಿಗೆ ದಿನಾಂಕ: 01–06–2007 ರಿಂದ 31–08–2011ರ ಅವಧಿಯಲ್ಲಾದ ವೇತನ ಭತ್ಯೆ ವ್ಯತ್ಯಾಸ ಪಾವತಿ ಮಾಡುವುದರ ಬಗ್ಗೆ ಸಭೆಯಲ್ಲಿ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರ.ಸಂ. | ವಿಷಯ | ತೀರ್ಮಾನ |
| --- | --- | --- |
| | ಸ್ಥಾನಿಯ ವೈದ್ಯರು / ಉಪನ್ಯಾಸಕರಾಗಿ ನೇಮಕ ಹೊಂದಿದವರಿಗೆ ದಿನಾಂಕ: 01–06–2007 ರಿಂದ 31–08–2011ರ ಅವಧಿಯಲ್ಲಾದ ವೇತನ ಭತ್ಯೆ ವ್ಯತ್ಯಾಸ ಪಾವತಿ ಮಾಡುವುದರ ಬಗ್ಗೆ. | ಕೂಲಂಕುಷವಾಗಿ ಚರ್ಚಿಸಲಾಯಿತು. ಸದರಿ ವಿಷಯವನ್ನು ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಂಡು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 17 | ಶ್ರೀಮತಿ ಅನುಸೂಯ. ಹೆಚ್. ಕೋಂ ಲೇಟ್ ಬಾಲಕೃಷ್ಣ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ. | ಶ್ರೀ. ಬಾಲಕೃಷ್ಣ ಇವರಿಗೆ ಈ ಸಂಸ್ಥೆಯ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನದಲ್ಲಿ 2010ರ ಸಾಲಿನ ನೇಮಕಾತಿ ಆದೇಶ ಸಂಖ್ಯೆ: ಹಿಮ್ಸ್ /ಸಿ(2)/06/2009–10/240, ದಿನಾಂಕ: 09–08–2010ರಲ್ಲಿ ವರ್ಕ್‌ಶಾಪ್ ವರ್ಕರ್ ಹುದ್ದೆಯ ವೇತನ ಶ್ರೇಣಿ 5200-100-6000-125-6500-150-7100-175-7800-200-8200 ರಲ್ಲಿ ನೇಮಕಾತಿ ಮಾಡಲಾಗಿದೆ. ಸದರಿಯವರು ದಿನಾಂಕ: 11.08.2010ರಂದು ವರ್ಕ್‌ಶಾಪ್ ವರ್ಕರ್ ಹುದ್ದೆಗೆ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಸರ್ಕಾರದ ಆದೇಶ ಸಂಖ್ಯೆ: ಆಕುಕ 249 ಕೆವಿಎಂ 2010, ದಿನಾಂಕ: 26–08–2010ರ ಆದೇಶದನ್ವಯ ಈ ನೇಮಕಾತಿಯೂ ಅಕ್ರಮವಾಗಿದೆ ಎಂಬ ಕಾರಣದಿಂದಾಗಿ ನೇಮಕಾತಿಯನ್ನು ರದ್ದುಗೊಳಿಸಲಾಗಿದ್ದಿತು. ಈ ನೇಮಕಾತಿಯನ್ನು ರದ್ದುಗೊಳಿಸಿ ಸದರಿ ನೌಕರರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಆಕುಕ 299 ಎಂಎಂಸಿ 2010 (ಭಾ), ದಿನಾಂಕ: 19–10–2011ರ ನ್ಯಾಯಾಲಯದ ಆದೇಶದನ್ವಯ ಕರ್ತವ್ಯಕ್ಕೆ ಮರು ನೇಮಕ ಮಾಡಲಾಗಿದೆ. ಆದರೆ ಶ್ರೀ ಬಾಲಕೃಷ್ಣ ದಿನಾಂಕ: 10.–12–2010ರಂದು ಮರಣವನ್ನು ಹೊಂದಿರುತ್ತಾರೆ.<br>ಶ್ರೀ. ಬಾಲಕೃಷ್ಣರವರು ಪತ್ನಿಯಾದ ಶ್ರೀಮತಿ ಅನುಸೂಯರವರು ಈ ಸಂಸ್ಥೆಗೆ ಅರ್ಜಿ ಸಲ್ಲಿಸಿ ಅನುಕಂಪದ ಆಧಾರದ ಮೇಲೆ ಗ್ರೂಪ್ ಡಿ, (ಅಟೆಂಡರ್) ಹುದ್ದೆಗೆ ನೇಮಕಾತಿ ಮಾಡುವಂತೆ ಸಲ್ಲಿಸಿರುವ ಮನವಿ ಪತ್ರದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ನ್ಯಾಯಾಲಯದ ಅಂತಿಮ ತೀರ್ಮಾನದ ಷರತ್ತಿಗೆ ಒಳಪಡುವುದರ ಜೊತೆಗೆ ವೈದ್ಯಕೀಯ ನಿರ್ದೇಶಕರು, ವೈದ್ಯಕೀಯ ನಿರ್ದೇಶನಾಲಯ, ಬೆಂಗಳೂರು, ಕರ್ನಾಟಕ ಸರ್ಕಾರ ಇವರಿಗೆ ವಿವರವಾದ ವರದಿಯನ್ನು ಸಲ್ಲಿಸಿ ಅವರ ವರದಿಯನ್ನು ಆಧರಿಸಿ ಪ್ರಸ್ತಾವನೆಯನ್ನು ಆಡಳಿತ ಮಂಡಳಿಯ ಸಭೆಯ ಮುಂದೆ ತರಲು ತೀರ್ಮಾನಿಸಲಾಯಿತು. |
| 18 | ಶ್ರೀಮತಿ ಹೇಮಾವತಿ ಬಿ.ಬಿ. ಕೋಂ ಲೇಟ್ ಕಾಂತರಾಜ್ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ. | ಲೇಟ್ ಹೆಚ್.ಟಿ. ಕಾಂತರಾಜ್‌ರವರು ಬಿ.ಎಸ್.ಎಫ್. 57ನೇ ಬಟಾಲಿಯನ್‌ನಲ್ಲಿ ಸೈನಿಕರಾಗಿ 26 ವರ್ಷಗಳು ಕಾರ್ಯನಿರ್ವಹಿಸಿದ್ದು, ಮೇ–01, 2011ರಲ್ಲಿ ಸೇವೆಯಲ್ಲಿದ್ದಾಗಲೇ ಪಶ್ಚಿಮ ಬಂಗಾಳದ ಗಡಿಯಲ್ಲಿ ಕಾಳಸಂತೆಕೋರರ ದಾಳಿಯಿಂದ ನಿಧನ ಹೊಂದಿದ್ದು ಶ್ರೀಮತಿ ಹೇಮಾವತಿ ಬಿ.ಬಿ. ಕೋಂ ಲೇಟ್ ಕಾಂತರಾಜ್, ಹರದನಹಳ್ಳಿ ಗ್ರಾಮ ಮತ್ತು ಅಂಚೆ, ಹೆಚ್.ಎನ್. ಪುರ ತಾಲ್ಲೂಕು, ಹಾಸನ ಜಿಲ್ಲೆರವರು ದಿನಾಂಕ: 11–11–2013ರಂದು ಅನುಕುಂಪದ ಆಧಾರದ ಮೇಲೆ ನೇಮಕಾತಿಯನ್ನು ಕೋರಿರುವ ಬಗ್ಗೆ,<br>ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ದಿನಾಂಕ: 01–01–2014ರಲ್ಲಿ ಸಲ್ಲಿಸಲಾಗಿದ್ದಿತು. |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಸರ್ಕಾರದ ಪತ್ರ ಸಂಖ್ಯೆ: ಆಕುಕ 11 ಕೆವಿಎಂ 2014, ದಿನಾಂಕ: 05-02-2014ರ ಪತ್ರದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಸಂಬಂಧ ಗ್ರೂಪ್ ಡಿ ಹುದ್ದೆಗೆ ಬೈಲಾ ಪ್ರಕಾರ ಸಂಸ್ಥೆಯ ನಿರ್ದೇಶಕರೇ ನೇಮಕಾತಿ ಪ್ರಾಧಿಕಾರ ಆಗಿರುತ್ತಾರೆ. ಆದ್ದರಿಂದ ಈ ಬಗ್ಗೆ ಸಂಸ್ಥೆಯ ಬೈಲಾ ಪ್ರಕಾರ / ಸಂಸ್ಥೆಯ ನಿಯಮಗಳ ಪ್ರಕಾರ ಪರಿಶೀಲಿಸಿ ಸಂಸ್ಥೆಯ ಹಂತದಲ್ಲಿಯೇ ಸೂಕ್ತ ಕ್ರಮ ವಹಿಸುವಂತೆ ಸೂಚಿಸಿರುವುದರಿಂದ ಸಂಸ್ಥೆಯ ಆಡಳಿತ ಮಂಡಳಿಯ ಸಭೆಯಲ್ಲಿ ಈ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವೈದ್ಯಕೀಯ ನಿರ್ದೇಶಕರು, ವೈದ್ಯಕೀಯ ನಿರ್ದೇಶನಾಲಯ, ಬೆಂಗಳೂರು, ಕರ್ನಾಟಕ ಸರ್ಕಾರ ಇವರಿಗೆ ವಿವರವಾದ ವರದಿಯನ್ನು ಸಲ್ಲಿಸಿ ಅವರ ವರದಿಯನ್ನು ಆಧರಿಸಿ ಪ್ರಸ್ತಾವನೆಯನ್ನು ಆಡಳಿತ ಮಂಡಳಿಯ ಸಭೆಯ ಮುಂದೆ ತರಲು ತೀರ್ಮಾನಿಸಲಾಯಿತು. |
| 19 | ಬೋಧಕ ಆಸ್ಪತ್ರೆಯಲ್ಲಿ ಖಾಲಿ ಇರುವ ರೇಡಿಯಾಲಜಿಸ್ಟ್ ಹುದ್ದೆಗೆ ತಾತ್ಕಾಲಿಕವಾಗಿ ನೇಮಿಸಿಕೊಂಡಿದ್ದ ವೈದ್ಯರು ವೇತನ ಹೆಚ್ಚಿಸಿಕೊಡುವಂತೆ ಕೋರಿರುವ ಬಗ್ಗೆ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ರೇಡಿಯಾಲಜಿ ವಿಭಾಗದಲ್ಲಿ ರೇಡಿಯಾಲಜಿಸ್ಟ್ ವೈದ್ಯರುಗಳು ಇಲ್ಲದಿರುವುದರಿಂದ ಖಾಸಗಿ ರೇಡಿಯಾಲಜಿಸ್ಟ್ ವೈದ್ಯರುಗಳನ್ನು ತಾತ್ಕಾಲಿಕವಾಗಿ ನಿಗದಿತ ಅವಧಿಯಲ್ಲಿ ನೇಮಿಸಿಕೊಳ್ಳಲು ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ದಿನಾಂಕ: 20-04-2012 ರಂದು ಕಛೇರಿ ಟಿಪ್ಪಣಿ ಕಂಡಿಕೆ 03ರಲ್ಲಿ ಅನುಮೋದನೆ ಪಡೆದು ಸದರಿ ವೈದ್ಯರಿಗೆ ಮಾಹೆಯಾನ ರೂ.30,000-00ಗಳ ಗೌರವಧನವನ್ನು ಬೋಧಕ ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಪಾವತಿಸಲಾಗುತ್ತದೆ. ಸದರಿ ವೈದ್ಯರು ದಿನಾಂಕ: 22-04-2014ರಂದು ಮನವಿ ಸಲ್ಲಿಸಿ ಸ್ನಾತಕೋತ್ತರ ಪದವಿ ಹೊಂದಿರುವುದರಿಂದ ಸ್ನಾತಕೋತ್ತರ ಪದವೀಧರರಿಗೆ ನೀಡುತ್ತಿರುವಂತೆ ಮಾಸಿಕ ವೇತನವನ್ನು 30,000-00 ರೂಗಳಿಂದ 60,000-00 ರೂಗಳಿಗೆ ಹೆಚ್ಚಿಸಿಕೊಡುವಂತೆ ಮನವಿ ಸಲ್ಲಿಸಿರುವುದರ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ವೇತನ ಭತ್ಯೆಗಳ ಕ್ರೂಢೀಕೃತ ವೇತನ ರೂ.36,960.00ರಲ್ಲಿ ರೂ(-)100.00ಗಳನ್ನು ಕಡಿತಗೊಳಿಸಿ ಪಾವತಿಸಬಹುದೆಂದು ತೀರ್ಮಾನಿಸಲಾಯಿತು. |
| 20 | 2014-15ನೇ ಸಾಲಿಗೆ ಸೇವಾ ನಿರತ ಕೋಟಾದಡಿ ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳುತ್ತಿರುವ ವೈದ್ಯರುಗಳ ಪಟ್ಟಿಯನ್ನು ಅನುಮೋದಿಸುವ ಬಗ್ಗೆ. | 2014ನೇ ಸಾಲಿನ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳಿಗೆ ಸೇವಾ ನಿರತ ವೈದ್ಯರುಗಳ ಕೋಟಾದಡಿಯಲ್ಲಿ ಪ್ರವೇಶ ಪಡೆಯಲು ರಾಷ್ಟ್ರೀಯ ಸ್ನಾತಕೋತರ ಪರೀಕ್ಷಾ ಮಂಡಳಿ ಮೂಲಕ ನಡೆದ ಪ್ರವೇಶ ಪರೀಕ್ಷೆಗೆ ಹಾಜರಾಗಿದ್ದು ಅದರಂತೆ ದಿನಾಂಕ: 02-03-2014ರಂದು ಪ್ರವೇಶ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿರುತ್ತದೆ. ಅದರಲ್ಲಿ ಡಾ. ಮಂಜುಳ.ಸಿ.ಜಿ., ಬೋಧಕರು, ದಂತ ಚಿಕಿತ್ಸಾ ವಿಭಾಗ ಇವರಿಗೆ (ಎಮ್.ಡಿ.ಎಸ್.,Conservative Dentistry and Endodontics) ವಿಭಾಗದಲ್ಲಿ ಸ್ನಾತಕೋತ್ತರ ಪದವಿಗೆ ಮತ್ತು ಡಾ. ರವಿ ಟಿ. ಚಿಕ್ಕಣ್ಣನವರ್, ಹಿರಿಯ ಸ್ಥಾನಿಯ ವೈದ್ಯರು, ವೈದ್ಯಶಾಸ್ತ್ರ ವಿಭಾಗ ಇವರು ವೈದ್ಯಶಾಸ್ತ್ರ (ಎಮ್.ಡಿ., ಜನರಲ್ ಮೆಡಿಸನ್) ವಿಭಾಗದಲ್ಲಿ ಸ್ನಾತಕೋತ್ತರ ಪದವಿಗೆ ಆಯ್ಕೆಯಾಗಿರುವುದನ್ನು ಚರ್ಚಿಸಿ ಅನುಮತಿ ನೀಡಲಾಯಿತು. ಖಾಲಿಯಾಗುವ ಇವರ ಜಾಗಕ್ಕೆ ಗುತ್ತಿಗೆ ಆಧಾರದಲ್ಲಿ ವೈದ್ಯರನ್ನು ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 21 | ಹಿಮ್ಸ್‌ನಲ್ಲಿ ನೂತನವಾಗಿ ಪ್ರಾರಂಭಿಸ – ಲಾಗುತ್ತಿರುವ (ಟಿಸಿಸಿ) Tertiary Cancer Centre ಘಟಕಕ್ಕೆ ಬೇಕಾಗಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಮಂಜೂರಾತಿಗಾಗಿ. | ಹಿಮ್ಸ್‌ನಲ್ಲಿ ನೂತನವಾಗಿ ಪ್ರಾರಂಭಿಸಲಾಗುತ್ತಿರುವ (ಟಿಸಿಸಿ) Tertiary Cancer Centre ಘಟಕಕ್ಕೆ ಬೇಕಾಗಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಮಂಜೂರಾತಿಗಾಗಿ. ಈ ಕೆಳಕಂಡ ಹುದ್ದೆಗಳನ್ನು ಹೊಸದಾಗಿ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದರ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. |

**ಅವಶ್ಯಕವಿರುವ ಹುದ್ದೆಗಳ ವಿವರ**

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಪದನಾಮ | ಹುದ್ದೆ ಸಂಖ್ಯೆ | ವೇತನ ಶ್ರೇಣಿ | ಪ್ರತಿ ತಿಂಗಳ ವೇತನ | ವಾರ್ಷಿಕ ವೇತನ | ವಿದ್ಯಾರ್ಹತೆ |
|---|---|---|---|---|---|---|---|
| 1 | ಮೆಡಿಕಲ್ ಅಂಕಾಲಜಿಸ್ಟ್ | ಸಹಾಯಕ ಪ್ರಾಧ್ಯಾಪಕರು / ಸಹ ಪ್ರಾಧ್ಯಾಪಕರು | 1 | 37400-67000+ AGP 9000 | 112440.00 | 1349280.00 | MD/DM WHO Fellowship in Medical Oncology |
| 2 | ಸರ್ಜಿಕಲ್ ಅಂಕಾಲಜಿಸ್ಟ್ | ಸಹಾಯಕ ಪ್ರಾಧ್ಯಾಪಕರು / ಸಹ ಪ್ರಾಧ್ಯಾಪಕರು | 1 | 37400-67000+ AGP 9000 | 112440.00 | 1349280.00 | MS/ MCH WHO Fellow ship |
| 3 | ಗೈನಿಕ್ ಅಂಕಾಲಜಿಸ್ಟ್ | ಸಹಾಯಕ ಪ್ರಾಧ್ಯಾಪಕರು / ಸಹ ಪ್ರಾಧ್ಯಾಪಕರು | 1 | 37400-67000+ AGP 9000 | 112440.00 | 1349280.00 | MS OBG) / Fellow ship |
| 4 | ಪ್ಯಾಲಿಯೇಟಿವ್ ಕೇರ್ ಸ್ಪೆಷಲಿಸ್ಟ್ | ಉಪನ್ಯಾಸಕರು / ಹಿರಿಯ ಸ್ಥನಿಯ ವೈದ್ಯರು | 1 | 15600-39100+ AGP 6000 | 75000.00 | 900000.00 | MD/DA in Anaesthesia, Certificate Course from RCC |
| 5 | ರೇಡಿಯೇಷನ್ ಅಂಕಾಲಜಿಸ್ಟ್ | ಸಹಾಯಕ ಪ್ರಾಧ್ಯಾಪಕರು / ಸಹ ಪ್ರಾಧ್ಯಾಪಕರು | 1 | 37400-67000+ AGP 9000 | 112440.00 | 1349280.00 | MD in Radio therapy |
| 6 | ಫಿಜಿಸಿಸ್ಟ್ | ಉಪನ್ಯಾಸಕರು | 1 | 15600-39000+ AGP 2000 | 41380.00 | 496560.00 | Degree in MSc Physics with certification from AERB |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|

| | | | | | | | |
|---|---|---|---|---|---|---|---|
| 7 | ಪ್ರಿವೇಂಟಿವ್ ಅಂಕಾಲಜಿಸ್ಟ್ | ಉಪನ್ಯಾಸಕರು/ ಸಹಾಯಕ ಪ್ರಾಧ್ಯಾಪಕರು | 1 | 15600-39100+ AGP 8000 | 75000.00 | 900000.00 | MD(Community Medicine) Experience Certificate from RCC |
| 8 | ರೇಡಿಯೇಶನ್ ಟೆಕ್ನಾಲಜಿಸ್ಟ್ | | 1 | 14550-350-26700 | 20078.00 | 240936.00 | Degree in Radiation technology with certification from AERB |
| 9 | ಪ್ರಥಮ ದರ್ಜೆ ಸಹಾಯಕರು | | 1 | 14550-350-26700 | 20078.00 | 240936.00 | Degree (2+3) in any releavent university and Computer knowledge |
| 10 | ದ್ವಿತೀಯ ದರ್ಜೆ ಸಹಾಯಕರು | | 2 | 11600-200-21000 | 31870.00 | 382440.00 | SSLC Pass and Computer knowledge |
| 11 | ಶುಶ್ರೂಷಕರು | | 2 | 17650-450-32000 | 47044.00 | 564528.00 | BSc Nursing or GNM Nursing |
| 12 | ಫಾರ್ಮಸಿಸ್ಟ್ | | 1 | 14550-350-26700 | 20078.00 | 240936.00 | Diploma in Pharmasist |
| 13 | ಡ್ರೈವರ್ | | 2 | 11600-200-21000 | 31870.00 | 382440.00 | 7th Pass |
| 14 | ಗ್ರೂಪ್ 'ಡಿ' | | 2 | 9600-200-14550 | 25800.00 | 309600.00 | 7th Pass |
| | **ಒಟ್ಟು ಮೊತ್ತ** | | | | **8,37,958.00** | **1,00,55,496.00** | |

ವಾರ್ಷಿಕ ಅಂದಾಜು ಮೊತ್ತ ರೂ.1,00,55,496.00(ರೂ.ಒಂದು ಕೋಟಿ ಐವತ್ತೈದು ಸಾವಿರದ ನಾಲ್ಕು ನೂರ ತೊಂಬತಾರು ಮಾತ್ರ) ಈ ಹುದ್ದೆಗಳು ಸಾರ್ವಜನಿಕ ರೋಗಿಗಳ ಹಿತದೃಷ್ಟಿಯಿಂದ ಅವಶ್ಯಕವಿರುವುದರಿಂದ ಹುದ್ದೆಗಳ ಮಂಜೂರಾತಿಗಾಗಿ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

<table>
<tr><th>ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td>22</td><td>ಹಿಮ್ಸ್ ಸಂಸ್ಥೆಯಲ್ಲಿ ಸ್ನಾತ್ತಕೋತ್ತರ ಪದವಿ ಕೋರ್ಸ್‌ಗಳ ಪ್ರಾರಂಭಕ್ಕೆ ಸಂಬಂಧಿಸಿದಂತೆ ಭಾರತೀಯ ವೈದ್ಯಕೀಯ ಪರಿಷತ್, ನವದೆಹಲಿ ಇವರು 10 ವಿಭಾಗಗಳಿಗೆ ಪರಿವೀಕ್ಷಣೆ ನಡೆಸಿರುವ ಬಗ್ಗೆ.</td><td>ಅ) 2014–15ನೇ ಸಾಲಿನಲ್ಲಿ ಹಿಮ್ಸ್ ಸಂಸ್ಥೆಯಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸುವ ಸಲುವಾಗಿ ಎಂ.ಸಿ.ಐ., ನವದೆಹಲಿ ಇವರಿಗೆ ತಲಾ ಕೋರ್ಸ್‌ಗೆ ರೂ.2.00 ಲಕ್ಷದಂತೆ 10 ಕೋರ್ಸ್‌ಗಳಿಗೆ ಒಟ್ಟು ರೂ.20.00 ಲಕ್ಷಗಳನ್ನು ಭಾರತೀಯ ವೈದ್ಯಕೀಯ ಪರಿಷತ್, ನವದೆಹಲಿ ಇವರಿಗೆ ಪಾವತಿಸಿದ್ದು ಎಂ.ಸಿ.ಐ., ನವದೆಹಲಿ ಇವರು ಹಿಮ್ಸ್ ಸಂಸ್ಥೆಗೆ ಭೇಟಿ ನೀಡಿ, ಒಟ್ಟು 10 ವಿಭಾಗಗಳಿಗೆ ಪರಿವೀಕ್ಷಣೆ ನಡೆಸಿ ಶರೀರ ಕ್ರಿಯಾ ಶಾಸ್ತ್ರ ವಿಭಾಗ :02/ ಮಿಣಿ ಜೀವಶಾಸ್ತ್ರ ವಿಭಾಗ :02 /ಔಷಧ ಶಸ್ತ್ರ ವಿಭಾಗ :03/ ನೇತ್ರ ಚಿಕಿತ್ಸಾ ವಿಭಾಗ :02/ ಚರ್ಮರೋಗ ಚಿಕಿತ್ಸಾ ವಿಭಾಗ :02 ಕೋರ್ಸ್‌ಗಳಿಗೆ ಅನುಮೋದನೆ ನೀಡಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.<br>ಆ) ಅಂಗರಚನಾ ಶಾಸ್ತ್ರ ವಿಭಾಗದ ಸ್ನಾತಕೋತ್ತರ ಕೋರ್ಸ್‌ನ ಸಂಬಂಧ ಮಾನ್ಯತೆ ಪಡೆಯಲು ಭಾರತೀಯ ವೈದ್ಯಕೀಯ ಪರಿಷತ್, ನವದೆಹಲಿ ಇವರಿಗೆ ಪರಿವೀಕ್ಷಣಾ ಶುಲ್ಕ ರೂ.75,000/–ಗಳನ್ನು ದಿನಾಂಕ: 22.02.2014ರಂದು ಪಾವತಿ ಮಾಡಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.<br>ಇ) 2015–16ನೇ ಸಾಲಿಗೆ ಈ ಕೆಳಕಂಡ ವಿಭಾಗಗಳಲ್ಲಿ<br>APPLICATION FOR OPENING MD/MS COURSES
<table>
<tr><th>Sl. No.</th><th>Subjects</th><th>MD/MS</th><th>No. of Seats</th></tr>
<tr><td>01</td><td>Bichemistry</td><td>MD</td><td>Two (02)</td></tr>
<tr><td>02</td><td>Pathology</td><td>MD</td><td>Two (02)</td></tr>
<tr><td>03</td><td>OTO-Rhinio-Laryngology (ENT)</td><td>MS</td><td>Two (02)</td></tr>
<tr><td>04</td><td>Peadiatrics</td><td>MD</td><td>Three (03)</td></tr>
<tr><td>05</td><td>General Medicine</td><td>MD</td><td>Four (04)</td></tr>
<tr><td>06</td><td>General Surgery</td><td>MS</td><td>Four (04)</td></tr>
<tr><td>07</td><td>Obstertrics & Gynecology (OBG)</td><td>MS</td><td>Four (04)</td></tr>
<tr><td>08</td><td>Anaesthesia</td><td>MD</td><td>Four (04)</td></tr>
<tr><td>09</td><td>Orthopedics</td><td>MS</td><td>Two (02)</td></tr>
</table>
ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸುವ ಸಲುವಾಗಿ ಎಮ್.ಸಿ.ಐ., ನವದೆಹಲಿ ಇವರಿಗೆ ತಲಾ ಕೋರ್ಸ್‌ಗೆ ರೂ.2.00 ಲಕ್ಷಗಳಂತೆ ಒಟ್ಟು ರೂ. 18.00ಲಕ್ಷಗಳನ್ನು ಈ ಕಛೇರಿ ಪತ್ರ ಸಂಖ್ಯೆ: ಹಿಮ್ಸ್ /ಯೂನಿ/ಪಿಜಿ/28/2014–15, ದಿನಾಂಕ:30–04–2014ರಂದು ಆಡಳಿತ ಮಂಡಳಿಯ ಘಟನೋತ್ತರ ನಿರೀಕ್ಷಣೆಯ ಮೇರೆಗೆ ಪಾವತಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.</td></tr>
<tr><td>23</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿರುವ ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯದಲ್ಲಿ</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿರುವ ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯ ಹಾಸನ ಈ ಸಂಸ್ಥೆಗೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 134 ಎಂಪಿಎಸ್ 2006, ದಿನಾಂಕ:17.08.2006ರಲ್ಲಿ ಈ ಕೆಳಕಂಡ ಹುದ್ದೆಗಳು ಮಂಜೂರಾಗಿರುತ್ತವೆ.</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

<table>
<tr><th>ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಖಾಲಿ ಇರುವ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ಭರ್ತಿ ಮಾಡಲು ಸರ್ಕಾರದಿಂದ ಅನುಮತಿ ಪಡೆದು ಸರ್ಕಾರದ ನಿಯಮಗಳ ಪ್ರಕಾರ ನೇಮಕಾತಿ ಮಾಡಲು ಅನುಮತಿ ಕೋರಿರುವ ಬಗ್ಗೆ</td><td>
<table>
<tr><th>ಕ್ರಮ ಸಂಖ್ಯೆ</th><th>ಹುದ್ದೆಯ ಹೆಸರು</th><th>ಮಂಜೂರು</th><th>ಭರ್ತಿ</th><th>ಖಾಲಿ</th><th>ಷರಾ</th></tr>
<tr><td>01</td><td>ಪ್ರೊಫೆಸರ್/ಪ್ರಾಂಶುಪಾಲರು</td><td>01</td><td>-</td><td>01</td><td></td></tr>
<tr><td>02</td><td>ಪ್ರೊಫೆಸರ್/ಉಪ ಪ್ರಾಂಶುಪಾಲರು</td><td>01</td><td>-</td><td>01</td><td></td></tr>
<tr><td>03</td><td>ರೀಡರ್ ಅಸೋಸಿಯೇಟ್ ಪ್ರೊಫೆಸರ್</td><td>02</td><td>-</td><td>02</td><td></td></tr>
<tr><td>04</td><td>ಉಪನ್ಯಾಸಕರು</td><td>10</td><td>05</td><td>05</td><td></td></tr>
<tr><td>05</td><td>ಕ್ಲಿನಿಕಲ್ ಇನ್ಸ್ ಸ್ಪೆಕ್ಟರ್</td><td>28</td><td>06</td><td>22</td><td></td></tr>
<tr><td>06</td><td>ಸಹಾಯಕ ಆಡಳಿತಾಧಿಕಾರಿ</td><td>01</td><td>01</td><td>-</td><td></td></tr>
<tr><td>07</td><td>ಕಛೇರಿ ಅಧೀಕ್ಷಕರು</td><td>01</td><td>-</td><td>01</td><td></td></tr>
<tr><td>08</td><td>ಆಪ್ತ ಸಹಾಯಕರು /ಶೀಘ್ರಲಿಪಿಗಾರರು</td><td>01</td><td>-</td><td>01</td><td></td></tr>
<tr><td>09</td><td>ನಗದು ಗುಮಾಸ್ಥರು /ಅಕೌಂಟೆಂಟ್</td><td>01</td><td>01</td><td>00</td><td></td></tr>
<tr><td>10</td><td>ಪ್ರಥಮ ದರ್ಜೆ ಸಹಾಯಕರು</td><td>02</td><td>02</td><td>00</td><td></td></tr>
<tr><td>11</td><td>ದ್ವಿತೀಯ ದರ್ಜೆ ಸಹಾಯಕರು</td><td>02</td><td>01</td><td>01</td><td></td></tr>
<tr><td>12</td><td>ಉಗ್ರಾಣ ಪಾಲಕರು</td><td>01</td><td>-</td><td>01</td><td></td></tr>
<tr><td>13</td><td>ಉಗ್ರಾಣ ನಿರ್ವಾಹಕರು</td><td>01</td><td>-</td><td>01</td><td></td></tr>
<tr><td>14</td><td>ಗ್ರಂಥಪಾಲಕರು</td><td>01</td><td>-</td><td>01</td><td></td></tr>
<tr><td>15</td><td>ಡಿ' ಗ್ರೂಪ್</td><td>04</td><td>03</td><td>01</td><td></td></tr>
<tr><td>16</td><td>ತರಗತಿ ಅಟೆಂಡರ್</td><td>02</td><td>02</td><td>00</td><td></td></tr>
<tr><td>17</td><td>ವಾಹನ ಚಾಲಕರು</td><td></td><td></td><td></td><td rowspan="2">ಹೊರಗುತ್ತಿಗೆ ಮೇಲೆತೆಗೆದು ಕೊಳ್ಳಲಾಗಿದೆ.</td></tr>
<tr><td>18</td><td>ಸ್ಯಾನಿಟರ್ ವರ್ಕರ್</td><td></td><td></td><td></td></tr>
<tr><td></td><td>ಒಟ್ಟು</td><td>59</td><td>21</td><td>38</td><td></td></tr>
</table>
ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಹುದ್ದೆಗಳ ವಿವರದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಸಭೆಯಲ್ಲಿ ಚರ್ಚಿಸಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರದ ಆರ್ಥಿಕ ಇಲಾಖೆಯ ಸಹಮತಿ ಹಾಗೂ ಸರ್ಕಾರದ ಅನುಮತಿ ಪಡೆದು ಸೂಕ್ತ ಕ್ರಮಕೈಗೊಳ್ಳಬಹುದೆಂದು ತೀರ್ಮಾನಿಸಲಾಯಿತು.</td></tr>
<tr><td>24</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯದ ಆವರಣದಲ್ಲಿ ಕೊಳವೆ</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಆವರಣದಲ್ಲಿ ಇದ್ದಂತಹ ಕೊಳವೆ ಬಾವಿ ಬತ್ತಿ ಹೋಗಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಉಂಟಾಗಿರುವ ನೀರಿನ ಕೊರತೆಯನ್ನು ಪರಿಹರಿಸುವ ಸಲುವಾಗಿ ಹೊಸದಾಗಿ ಭೂ ವಿಜ್ಞಾನ ಇಲಾಖೆಯವರು ಗುರುತಿಸಿರುವ ಜಾಗದಲ್ಲಿ ಕೊಳವೆ ಬಾವಿ</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | ಬಾವಿ ಕೊರೆಸಿರುವುದರ ಸಂಬಂಧಿಸಿದ ಮೊತ್ತದ ಪಾವತಿ ಬಗ್ಗೆ. | ಕೊರೆಸಲು ಲೋಕೋಪಯೋಗಿ ಇಲಾಖೆ, ಹಾಸನ ರವರ ಮೂಲಕ 2013–14ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ ದರಪಟ್ಟಿ ಆಧಾರದಲ್ಲಿ ಹೊಸ ಬೋರ್ ವೆಲ್ ಕೊರೆಸುವಂತೆ ಕ್ರಮವಹಿಸಲಾಗಿದ್ದು. ಸದರಿ ಬೋರ್ ವೆಲ್ ಕೊರೆಯಲ್ಲಿಟ್ಟಿದ್ದರೂ ನೀರು ದೊರೆಯದೆ ವಿಫಲವಾಗಿರುತ್ತದೆ. ಈ ಬಗ್ಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ. 01, ಲೋಕೋಪಯೋಗಿ ಬಂದರು ಮತ್ತು ಒಳನಾಡು ಇಲಾಖೆ, ಉಪವಿಭಾಗ, ಹಾಸನರವರು ನೀಡಿರುವ ವರದಿಯ ಪ್ರಕಾರ ರೂ.87,000.00 ಗಳನ್ನು (ರೂ. ಎಂಬತ್ತೇಳು ಸಾವಿರ ಮಾತ್ರ) ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯ ನಿರೀಕ್ಷಣೆ ಮೇರೆ ಪಾವತಿ ಮಾಡಲಾಗಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 25 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2012–13ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಅನುಮೋದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2012–13ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಸಂಸ್ಥೆಯಿಂದ ನೇಮಕ ಮಾಡಿಕೊಂಡಿರುವ ಶ್ರೀ ಅಭಿನಂದನ, ಚಾರ್ಟೆಡ್ ಅಕೌಂಟೆಂಟ್, ಹಾಸನ ಇವರಿಂದ ಸಂಸ್ಥೆಯ ಎಲ್ಲಾ ವಿಭಾಗಗಳ ಲೆಕ್ಕ ಪರಿಶೋಧನೆಯನ್ನು ಮಾಡಿಸಿದ್ದು, ಸದರಿಯವರು ನೀಡಿರುವ ಲೆಕ್ಕ ಪರಿಶೋಧನಾ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಸದರಿ ವರದಿಯನ್ನು ಒಪ್ಪಿ ಅನುಮೋದಿಸಲಾಯಿತು ಮತ್ತು 2013–14ನೇ ಸಾಲಿಗೆ ಚಾರ್ಟೆಡ್ ಅಕೌಂಟೆಂಟ್‌ರವರಿಂದ ಆಡಿಟ್ ಮಾಡಿಸಲು ಕ್ರಮ ವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 26 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2014–15ನೇ ಸಾಲಿನ ಅಂದಾಜು ಆಯಾ–ವ್ಯಯ ಪಟ್ಟಿಯನ್ನು ಅನುಮೋದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯಕೀಯ ಕಾಲೇಜು, ಶ್ರೀ ಚಾಮರಾಜೇಂದ್ರ ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ಮತ್ತು ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹೊಳೆನರಸೀಪುರ ಇಲ್ಲಿಗೆ 3ನೇ ಹಂತದ ಕಟ್ಟಡ ಕಾಮಗಾರಿ, ಹೊಸ ಆಸ್ಪತ್ರೆ ಕಟ್ಟಡಕ್ಕೆ ಉಪಕರಣ ಮತ್ತು ಪೀಠೋಪಕರಣಗಳ ಖರೀದಿ, ಗ್ರಂಥಾಲಯ ಪುಸ್ತಕ, ಔಷಧಿ ಮತ್ತು ರಾಸಾಯನಿಕಗಳು, ಸಿಬ್ಬಂದಿ ವೇತನ, ಶಿಷ್ಯ ವೇತನ, ಹೊರಗುತ್ತಿಗೆ ಸಿಬ್ಬಂದಿಗಳ ನಿರ್ವಹಣೆ, ವೈದ್ಯಕೀಯ ವೆಚ್ಚ ಮರುಪಾವತಿ ಹಾಗೂ ಇತರೆ ವೆಚ್ಚ ಭರಿಸಲು 2014–15ನೇ ಸಾಲಿಗೆ ಅಗತ್ಯವಿರುವ ಅಂದಾಜು ಅನುದಾನದ ವಿವರವನ್ನು ಈ ಕಛೇರಿ ಪತ್ರ ಸಂಖ್ಯೆ: ಹಿಮ್ಸ್ /ಲೆ.ಪ/04/2013–14, ದಿನಾಂಕ: 26–11–2013ರಂದು ಸರ್ಕಾರಕ್ಕೆ ಸಲ್ಲಿಸಿರುವುದನ್ನು ಚರ್ಚಿಸಿ ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಲಾಯಿತು. |

| ಕ್ರ.ಸಂ | ಲೆಕ್ಕಶೀರ್ಷಿಕೆಗಳು | ಕೋರಿರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | 4210–03–105–1–02–386 (ಯೋಜನೆ) | 4500.00 |
| 2 | 4210–03–105–1–02–386 (ಯೋಜನೆ) | 4239.24 |
| 3 | 2210–05–105–1–47–101 (ಯೋಜನೇತರ) | 2006.05 |
| 4 | 2210–05–105–1–40–101 (ಯೋಜನೇತರ) | 2421.47 |
| 5 | 2210–05–105–1–40–101 (ಯೋಜನೆ) | 2242.07 |
| | ಒಟ್ಟು | **15408.83** |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

<table>
<tr><th>ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td>27</td><td>2014-15ನೇ ಸಾಲಿಗೆ ಭದ್ರತಾ ಮೇಲ್ವಿಚಾರಕರು, ಭದ್ರತಾ ಸಿಬ್ಬಂದಿ ಮತ್ತು ಇತರೆ ಸೇವೆಯನ್ನು ಹೊರ ಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಇ-ಟೆಂಡರ್ ಕರೆದು ಕಾರ್ಯಾದೇಶ ನೀಡಿರುವುದನ್ನು ಅನುಮೋದಿಸುವ ಬಗ್ಗೆ.</td><td>ಸಂಸ್ಥೆಯ ಅಧೀನದಲ್ಲಿ ಬರುವ ವೈದ್ಯಕೀಯ ಕಾಲೇಜು, ವೈದ್ಯಕೀಯ ವಸತಿ ಗೃಹ, ವೈದ್ಯಕೀಯ ವಿದ್ಯಾರ್ಥಿಗಳ ವಸತಿ ನಿಲಯಗಳು, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಮತ್ತು ಸರ್ಕಾರಿ ಶುಶ್ರೂಷ ವಸತಿ ನಿಲಯ ಇವುಗಳಿಗೆ ಭದ್ರತಾ, ಸ್ವಚ್ಛತಾ ಮತ್ತು ಇತರೆ ಸೇವೆಗಳನ್ನು ಪಡೆಯಲು ಅಗತ್ಯವಿರುವ ಈ ಕೆಳಕಂಡ
<table>
<tr><th>ಕ್ರಮ ಸಂಖ್ಯೆ</th><th>ವಿವರ</th><th>2014-15 ನೇ ಸಾಲಿಗೆ ಅಗತ್ಯವಿರುವ ಸಿಬ್ಬಂದಿಗಳ ಸಂಖ್ಯೆ</th></tr>
<tr><td>1</td><td>ಸೆಕ್ಯೂರಿಟಿ ಸೂಪರ್ ವೈಸರ್</td><td>08</td></tr>
<tr><td>2</td><td>ಸ್ವಚ್ಛತಾ ಸೂಪರ್ ವೈಸರ್</td><td>08</td></tr>
<tr><td>3</td><td>ಸೆಕ್ಯೂರಿಟಿ ಗಾರ್ಡ್</td><td>70</td></tr>
<tr><td>4</td><td>ಸ್ವಚ್ಛತಾ ಕಾರ್ಮಿಕರು</td><td>160</td></tr>
<tr><td>5</td><td>ವಾಹನ ಚಾಲಕರು</td><td>04</td></tr>
<tr><td>6</td><td>ದೋಬಿ</td><td>06</td></tr>
<tr><td>7</td><td>ಎಲೆಕ್ಟ್ರಿಷಿಯನ್</td><td>06</td></tr>
<tr><td>8</td><td>ಪ್ಲಂಬರ್</td><td>04</td></tr>
<tr><td>9</td><td>ಗಾರ್ಡನರ್</td><td>04</td></tr>
<tr><td></td><td>ಒಟ್ಟು</td><td>270</td></tr>
</table>
ಒಟ್ಟು 270 ಹುದ್ದೆಗಳನ್ನು ಆಡಳಿತ ಮಂಡಳಿಯ ಘಟನೋತ್ತರ ಅನುಮತಿಯ ನಿರೀಕ್ಷಣೆಯ ಮೇರೆಗೆ ಇ-ಟೆಂಡರ್ ಮೂಲಕ ಪಡೆಯಲು ಟೆಂಡರ್ ಕರೆದು ಟೆಂಡರ್‌ನ ಎಲ್ಲಾ ನಿಯಮಾನುಸಾರ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿರುತ್ತದೆ.<br>
ಟೆಂಡರ್ ದಸ್ತಾವೇಜಿನ ಪುಟ 14ರ ಅನುಬಂಧ(1)ರಲ್ಲಿ ತಿಳಿಸಿರುವಂತೆ ಮತ್ತು ಕೆಟಿಪಿಪಿ ಕಾಯ್ದೆಯ ಸೆಕ್ಷನ್ 28(ಸಿ) ಪ್ರಕಾರ Quality and cost based selection (QCBS) ವಿಧಾನದ ಮೂಲಕ ಹಾಗೂ ಅಡಿಟರ್ ನೀಡಿರುವ ವರದಿಯಂತೆ ಮತ್ತು ಈ ಹಿಂದೆ ಇದೇ ಸಂಸ್ಥೆಯಲ್ಲಿ ತೃಪ್ತಿಕರವಾಗಿ ಕಾರ್ಯ ನಿರ್ವಹಿಸಿದ್ದ M/s Suraksha Security Services, Hassan ಇವರನ್ನು ಅಂತಿಮವಾಗಿ ಎಲ್-1 ಎಂದು ಪರಿಗಣಿಸಿ ದಿನಾಂಕ: 01.05.2014 ರಿಂದ 30.04.2015ರ ತನಕ ಒಂದು ವರ್ಷದ ಅವಧಿಗೆ ಕಛೇರಿ ಪತ್ರ ಸಂಖ್ಯೆ: ಹಿಮ್ಸ್ /ಟಿಎಸ್/ಹೊಗು/ಸೇವೆ/21/2014-15, ದಿನಾಂಕ: 30.04.2014ರಂದು ಕಾರ್ಯಾದೇಶ ಜಾರಿಗೊಳಿಸಿರುವುದನ್ನು ಮತ್ತು ಸಂಸ್ಥೆ ಹಾಗೂ ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಸ್ವಚ್ಛತಾ, ಭದ್ರತಾ ಮತ್ತು ಇತರೆ ಸೇವೆಗಳನ್ನು ಪಡೆಯಲು ಒಟ್ಟು 270 ಮಾನವ</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಸಂಪನ್ಮೂಲಗಳ ಸೇವೆಗೆ ವಾರ್ಷಿಕ ವೆಚ್ಚ ಒಟ್ಟು ರೂ.2,57,25,864–00 (ಕಾಲ ಕಾಲಕ್ಕೆ ಕಾರ್ಮಿಕ ಇಲಾಖೆಯ ಕಾರ್ಮಿಕರಿಗೆ ಪರಿಷ್ಕರಿಸುವ ವೇತನ ದರವನ್ನು ಹೊರತುಪಡಿಸಿ ) ವೆಚ್ಚವನ್ನು ಒಪ್ಪಿ ಅನುಮೋದಿಸಲಾಯಿತು. |
| 28 | 2014–15ನೇ ಸಾಲಿಗೆ ಹೊಸ ಆಸ್ಪತ್ರೆ, ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ವೈದ್ಯಕೀಯ ಕಾಲೇಜು ಹಾಗೂ ನರ್ಸಿಂಗ್ ಕಾಲೇಜುಗಳ ಎಲ್ಲಾ ಆಡಳಿತ ವ್ಯವಹಾರಗಳನ್ನು ಸಂಪೂರ್ಣವಾಗಿ ಗಣಕೀಕೃತಗೊಳಿಸಲು ಗಣಕ ಯಂತ್ರಗಳ ನಿರ್ವಹಣೆ ಮತ್ತು ನೆಟ್ ವರ್ಕಿಂಗ್‌ಗೆ ಸಂಬಂಧಿಸಿದಂತೆ ಇ–ಟೆಂಡರ್ ಕರೆಯುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 2008–09, 2009–10 ಮತ್ತು 2010–11ನೇ ಸಾಲಿನ 3 ವರ್ಷಗಳ ಅವಧಿಗೆ ಗಣಕ ಯಂತ್ರಗಳ ಗಣಕೀಕರಣ, ವಿವಿಧ ತಂತ್ರಾಂಶಗಳ ಅಳವಡಿಕೆ ಮತ್ತು ಗಣಕ ಯಂತ್ರಗಳ (ಸರ್ವರ್ ಒಳಗೊಂಡಂತೆ) ಹಾಗೂ ಕಾರ್ಯ ನಿರ್ವಹಿಸುವ ಟೆಂಡರ್ ಅವಧಿಯು ದಿನಾಂಕ: 09–09–2011ಕ್ಕೆ ಮುಕ್ತಾಯವಾಗಿರುತ್ತದೆ. 2011–12ನೇ ಸಾಲಿಗೆ ಕರೆಯಲಾಗಿದ್ದ ಟೆಂಡರ್ ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ಪೂರ್ಣಗೊಳ್ಳದೇ ಸ್ಥಗಿತಗೊಂಡಿರುತ್ತದೆ. ಸಾರ್ವಜನಿಕ ಮತ್ತು ಸಂಸ್ಥೆಯ ಕಾರ್ಯನಿರ್ವಹಣೆಯ ಹಿತದೃಷ್ಟಿಯಿಂದಾಗಿ 2013–14ನೇ ಸಾಲಿಗೆ ಹೊಸದಾಗಿ ಇ–ಟೆಂಡರ್ ಕರೆಯುವ ಬಗ್ಗೆ ದಿನಾಂಕ:22.06.2013ರಂದು ನಡೆದ 16ನೇ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿ ಈ ಹಿಂದಿನ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಿ ಹೊಸದಾಗಿ ಇ–ಟೆಂಡರ್ ಕರೆಯುವಂತೆ ತೀರ್ಮಾನವಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು ಮತ್ತು ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ವೈದ್ಯಕೀಯ ಕಾಲೇಜು, ಡಿಜಿಟಲ್ ಲೈಬ್ರರಿ ಹಾಗೂ ನರ್ಸಿಂಗ್ ಕಾಲೇಜು ಹಾಗೂ ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳನ್ನು ಒಳಗೊಂಡಂತೆ ಎಲ್ಲಾ ಆಡಳಿತ ವ್ಯವಹಾರಗಳನ್ನು ಸಂಪೂರ್ಣವಾಗಿ ಗಣಕೀಕೃತಗೊಳಿಸಲು / ಗಣಕ ಯಂತ್ರಗಳ ನಿರ್ವಹಣೆ ಮತ್ತು ವೈ–ಫೈ ನೆಟ್ ವರ್ಕಿಂಗ್‌ಗೆ ಸಂಬಂಧಿಸಿದಂತೆ ಇ–ಟೆಂಡರ್ ಕರೆಯಲು ಸುಮಾರು ಅಂದಾಜು 50 ರಿಂದ 60 ಲಕ್ಷ ರೂಗಳ ವೆಚ್ಚದ ಯೋಜನಾವರದಿಯ ಬಗ್ಗೆ ಸಂಸ್ಥೆಯ ಮುಂದೆ ಮಂಡಿಸಿದರು. ಸದರಿ ಯೋಜನೆಯನ್ನು ಅಳವಡಿಸಿದಲ್ಲಿ ಆಗುವ ಸಾಧಕ–ಬಾಧಕಗಳು ಹಾಗೂ ಅಂದಾಜು ವೆಚ್ಚದ ಬಗ್ಗೆ ಚರ್ಚಿಸಲಾಯಿತು. ಈ ಸಂಬಂಧ ಕರ್ನಾಟಕ ಸರ್ಕಾರದ ಅಧಿಕೃತ ನೆಟ್‌ವರ್ಕಿಂಗ್ ಸೇವೆಯನ್ನು ಒದಗಿಸುವ National Information Centre, (NTC), Bengaluru ರವರನ್ನು ಸಂಪರ್ಕಿಸಿ ಪತ್ರ ವ್ಯವಹಾರ ನಡೆಸಿ ಮುಂದಿನ ಕ್ರಮವಹಿಸುವಂತೆ ಸೂಚಿಸಿಲಾಯಿತು. |
| 29 | 2014–15ನೇ ಸಾಲಿಗೆ ಆಸ್ಪತ್ರೆ ಮತ್ತು ಕಾಲೇಜುಗಳ ಉಪಹಾರ ಮಂದಿರಕ್ಕೆ ಇ–ಟೆಂಡರ್ ಕರೆಯುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿನ ಉಪಹಾರ ಮಂದಿರವನ್ನು 2011–12ನೇ ಸಾಲಿಗೆ ಮಾಸಿಕ ಪರವಾನಿಗೆ ಶುಲ್ಕದ ಆಧಾರದ ಮೇಲೆ ನೀಡಲಾಗಿದ್ದ ಟೆಂಡರ್ ಅವಧಿಯು ದಿನಾಂಕ:17.05.2012ಕ್ಕೆ ಮುಗಿದಿರುವುದರಿಂದ 2014–15ನೇ ಸಾಲಿಗೆ ಆಸ್ಪತ್ರೆ ಮತ್ತು ಕಾಲೇಜುಗಳ ಉಪಹಾರಮಂದಿರಕ್ಕೆ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಇ–ಟೆಂಡರ್ ಕರೆಯುವುದೆಂದು ತೀರ್ಮಾನಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

<table>
<tr><th>ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td>30</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೈಲಾದ ನವೀಕರಣಕ್ಕೆ ಸಂಬಂಧಿಸಿದಂತೆ ಶುಲ್ಕವನ್ನು ಪಾವತಿಸುವ ಬಗ್ಗೆ.</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೈಲಾದ ನವೀಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ನೋಂದಾಣಿ ಕಛೇರಿ, ಹಾಸನ ಜಿಲ್ಲೆ ಹಾಸನ. ಇವರು ದಿನಾಂಕ:13.11.2013 ರಂದು ಈ ಸಂಸ್ಥೆಗೆ ಪತ್ರ ಬರೆದು ಸಂಸ್ಥೆಯ ನವೀಕರಣಕ್ಕೆ ಸಂಬಂಧಿಸಿದಂತೆ2005–06ನೇ ಸಾಲಿನಿಂದ 2011–12ನೇ ಸಾಲಿನವರೆಗೆ ಒಟ್ಟು ರೂ.9,88,700.00 ಗಳನ್ನು ಪಾವತಿಸುವಂತೆ ತಿಳಿಸಿರುವ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು ನವೀಕರಣದ ಬಾಬ್ತನ್ನು ಪಾವತಿಸುವುದೆಂದು ಒಪ್ಪಿ ಅನುಮೋದಿಸಲಾಯಿತು.</td></tr>
<tr><td>31</td><td>ಸ್ಥಳೀಯ ನ್ಯಾಯಾಲಯ ಮತ್ತು ಘನ ಉಚ್ಚ ನ್ಯಾಯಾಲಯದಲ್ಲಿ ಸಂಸ್ಥೆಯ ಮೇಲೆ ಇರುವ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಸಂಸ್ಥೆಯಿಂದ ನೇಮಕ ಮಾಡಿಕೊಂಡಿರುವ ವಕೀಲರಿಗೆ ಶುಲ್ಕ ಪಾವತಿಸುವ ಬಗ್ಗೆ ಮತ್ತು ಸಂಸ್ಥೆಯ ಮೇಲಿರುವ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಹಾಲಿ ಕಾನೂನು ಸಲಹೆ ನೀಡುತ್ತಿರುವ ವಕೀಲರ ಸೇವೆಯನ್ನು ಮುಂದುವರೆಸುವ ಬಗ್ಗೆ.</td><td>1) ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಆಡಳಿತ ಮಂಡಳಿಯ ಘಟನ್ನೋತ್ತರ ನಿರೀಕ್ಷಣೆಯ ಮೇರೆಗೆ ವಕೀಲರಿಗೆ ಪಾವತಿಸಿರುವ ಈ ಕೆಳಕಂಡ ಶುಲ್ಕವನ್ನು ಒಪ್ಪಿ ಅನುಮೋದಿಸಲಾಯಿತು.
<table>
<tr><th>ಕ್ರಮ ಸಂಖ್ಯೆ</th><th>ವಿವರ</th><th>ವಕೀಲರ ಹೆಸರು</th><th>ಮೊಬಲಗು</th></tr>
<tr><td>01</td><td>Assistant Commissioner of customs in No:29/2010-11 at Mumbai</td><td>ಶ್ರೀ.ಜೆ.ಏ.ಧರ್ಮೇಂದ್ರ ನಾಯಕ್</td><td>16,100</td></tr>
<tr><td>02</td><td>WP.No.32725-742/2012<br>WP.No.41983/2012<br>WP.No.13086/2012<br>WP.No.17013/2012<br>WP.No. 267/2012</td><td>ಶ್ರೀ. ಶೇಷಗಿರಿ ರಾವ್</td><td>71,000</td></tr>
<tr><td>03</td><td>OS236/13</td><td>ಶ್ರೀ. ಹರೀಶ್ ಬಾಬು</td><td>22,000</td></tr>
<tr><td>04</td><td>OS236/13</td><td>ಶ್ರೀ. ಹರೀಶ್ ಬಾಬು</td><td>15,000</td></tr>
<tr><td>05</td><td>CC No 23 and 31/2011-12</td><td>ಶ್ರೀ. ಹರೀಶ್ ಬಾಬು</td><td>20,000</td></tr>
<tr><td>06</td><td>ಮೆ.ಸಾಯಿ ಸೈಕ್ಯೂರಿಟಿ ಏಜೆನ್ಸಿ, ಬೆಂಗಳೂರು. WP.No.50362 -50363/ 2012</td><td>ಶ್ರೀ. ಶೇಷಗಿರಿ ರಾವ್</td><td>20,000</td></tr>
<tr><td>07</td><td>ಮೆ.ಸಾಯಿ ಸೈಕ್ಯೂರಿಟಿ ಏಜೆನ್ಸಿ, ಬೆಂಗಳೂರು. WP.No.50362-50363/ 2012</td><td>ಶ್ರೀ. ಶೇಷಗಿರಿ ರಾವ್</td><td>20,000</td></tr>
<tr><td colspan="2">ಒಟ್ಟು ಮೊತ್ತ</td><td></td><td>1,84,100–00</td></tr>
</table></td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | 2) ಶ್ರೀ ಸಂದೀಪ್ ಪಾಟೀಲ್, ನ್ಯಾಯವಾದಿಗಳು, ಹೈಕೋರ್ಟ್, ಕರ್ನಾಟಕ ಇವರು ಬೋಧಕೇತರ ಸಿಬ್ಬಂದಿಗಳ ನೇಮಕಾತಿ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಸಂಸ್ಥೆಯ ಪರವಾಗಿ ಉಚ್ಚ ನ್ಯಾಯಲಯದಲ್ಲಿ ವಾದ ಮಂಡಿಸಿದ ಶುಲ್ಕ ರೂ. 3,65,750.00 ಪಾವತಿ ಮಾಡುವಂತೆ ಕೋರಿರುತ್ತಾರೆ. ಆದರೆ ಇವರ ನೇಮಕಾತಿ ಬಗ್ಗೆ ಸಂಸ್ಥೆಯಲ್ಲಿ ಯಾವುದೇ ದಾಖಲೆ ಇರುವುದಿಲ್ಲ. ಈ ವಿಷಯವನ್ನು ಸರ್ಕಾರದ ಅವಗಾಹನೆಗೆ ದಿನಾಂಕ: 26.03.2014 ರಂದು ತಂದಿದ್ದು, ಇನ್ನೂ ಸರ್ಕಾರದಿಂದ ಆದೇಶ ಬಂದಿರುವುದಿಲ್ಲ. ಬಿಲ್ ಪಾವತಿಯ ಬಗ್ಗೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಆದೇಶ ಕೋರಿ ಈ ಕಛೇರಿ ಪತ್ರ ಸಂಖ್ಯೆ: ಹಿಮ್ಸ್/ಸಿ(3)/125/2013-14, ದಿನಾಂಕ:20-03-2014. ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿರುವುದರ ಬಗ್ಗೆ ಚರ್ಚಿಸಿ ಈ ಬಗ್ಗೆ ಸರ್ಕಾರದ ಹಂತದಲ್ಲಿನ ತೀರ್ಮಾನದನ್ವಯ ಪಾವತಿಗೆ ಕ್ರಮ ವಹಿಸಲು ಸೂಚಿಸಲಾಯಿತು.<br><br>3. ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸಂಬಂಧಪಟ್ಟ ಸ್ಥಳೀಯ ಹಾಗೂ ಸ್ಥಳೀಯೇತರ ನ್ಯಾಯಾಲಯಗಳಲ್ಲಿ ಸಂಸ್ಥೆಯ ಪರವಾಗಿ ಹಾಜರಾಗಲು ಹಾಗೂ ವಾದ ಮಂಡಿಸಲು ಸಂಸ್ಥೆಯ ಆಡಳಿತ ಸಮಿತಿಯಿಂದ ನೇಮಕ ಮಾಡಿಕೊಂಡಿದ್ದ ವಕೀಲರುಗಳಾದ-<br>1. ಶ್ರೀ. ಟಿ. ಶೇಷಗಿರಿರಾವ್, ಬೆಂಗಳೂರು.<br>2. ಶ್ರೀ. ರಾಮಕೃಷ್ಣ ಸ್ವಾಮಿ, ಮೈಸೂರು.<br>3. ಶ್ರೀ. ಹರೀಶ್ ಬಾಬು, ಹಾಸನ.<br>4. ಶ್ರೀ. ಸತೀಶ್, ಚಿಕ್ಕಮಗಳೂರು.<br>ಇವರುಗಳ ನೇಮಕಾತಿಯನ್ನು ಅನುಮೋದಿಸಿ ಮುಂದಿನ ಸಾಲಿನಲ್ಲಿ ನೇಮಕ ಮಾಡುವಾಗ ನಿಯಮಾನುಸಾರ ಪ್ರಕಟಣೆ ಹೊರಡಿಸಿ ನ್ಯಾಯವಾದಿಗಳಿಂದ ಸಮ್ಮತಿ ಪತ್ರ ಪಡೆದು ನಂತರ ನೇಮಕ ಮಾಡಲು ಕ್ರಮ ಕೈಗೊಳ್ಳಲೆಂದು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಆದರೆ ನೇಮಕಾತಿ ಅವಧಿಯನ್ನು ತೀರ್ಮಾನಿಸಿರುವುದಿಲ್ಲ. ಇದೀಗ 02 ವರ್ಷ ಪೂರ್ಣಗೊಂಡಿರುವುದರಿಂದ ಮುಂದಿನ 03 ವರ್ಷಗಳ ಅವಧಿಗೆ ಈಗಾಗಲೇ ನೇಮಿಸಿಕೊಂಡಿರುವ ಮೇಲ್ಕಂಡ ವಕೀಲರ ಸೇವೆಯನ್ನು ಮುಂದುವರೆಸುವ ಬಗ್ಗೆ ಒಪ್ಪಿ ಅಂಗೀಕರಿಸಲಾಯಿತು. |
| 32 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿರುವ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯದ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿರುವ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯದಲ್ಲಿ BSc Nursing, MSc Nursing and PCBSc ಕೋರ್ಸ್‌ಗಳು ನಡೆಯುತ್ತಿದ್ದು, ಪ್ರಸ್ತುತ ಕಟ್ಟಡದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ವಿದ್ಯಾರ್ಥಿಗಳು ವಾಸ ಮಾಡುತ್ತಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯವನ್ನು ಒದಗಿಸುವುದು ಕಷ್ಟಕರವಾಗಿರುತ್ತದೆ. ಈ ವಿಷಯವು ಹಿಂದಿನ ಜಿಲ್ಲಾಧಿಕಾರಿಗಳ ಗಮನಕ್ಕೂ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಕ್ರ.ಸಂ. | ವಿಷಯ | ತೀರ್ಮಾನ |
| --- | --- | --- |
| | ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಅಗತ್ಯ ಅನುದಾನ ಬಿಡುಗಡೆ ಮಾಡುವ ಬಗ್ಗೆ. | ಸಹ ಬಂದಿದ್ದು, ಮಾನ್ಯ ಜಿಲ್ಲಾಧಿಕಾರಿಗಳ ಗಮನಕ್ಕೂ ಸಹ ಬಂದಿದ್ದು, ಮಾನ್ಯ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರಿಂದ ಶುಶ್ರೂಷ ಕಟ್ಟಡ ಕಾಮಗಾರಿಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾನು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ ಇವರು ಕಾಮಗಾರಿಯ ಅಂದಾಜು ವೆಚ್ಚ ರೂ. 300.00 ಲಕ್ಷಗಳಿಗೆ Line Estimate ನೀಡಿರುತ್ತಾರೆ. ಸರ್ಕಾರದಿಂದ SCP/STP ಯೋಜನೆಯಡಿಯಲ್ಲಿ ರೂ.300.00 ಲಕ್ಷಗಳ ಅನುದಾನವು ಬಿಡುಗಡೆಯಾಗುವ ಹಂತದಲ್ಲಿದ್ದು, ಈ ಅನುದಾನದಲ್ಲಿ ಸದರಿ ಮಹಿಳಾ ಶುಶ್ರೂಷಾ ವಿದ್ಯಾರ್ಥಿನಿಲಯದ ಕಟ್ಟಡ ಕಾಮಗಾರಿಯನ್ನು ಕೈಗೊಳ್ಳಬಹುದಾಗಿರುತ್ತದೆ. ಈ ಸಂಬಂಧ ಆಡಳಿತಾತ್ಮಕ ಅನುಮೋದನೆ ಮತ್ತು ಅಗತ್ಯ ಅನುದಾನವನ್ನು ಬಿಡುಗಡೆ ಮಾಡಬೇಕಾಗಿ ಸರ್ಕಾರಕ್ಕೆ ಪತ್ರ ಬರೆದಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 33 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಮಕ್ಕಳ ವಾರ್ಡಿನ NICU ಘಟಕದ ವಾರ್ಡ್ ನಿರ್ಮಾಣದ ಕಾಮಗಾರಿಯ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆಯಾದ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಹಳೆ ಕಟ್ಟಡದಲ್ಲಿ ಮಕ್ಕಳ ವಾರ್ಡಿನ ಎನ್.ಐ.ಸಿಯು. ಘಟಕದ ಸ್ಥಳಾವಕಾಶ ಕಡಿಮೆ ಇದ್ದು, ಹಾಲಿ ಜಾಗದಲ್ಲಿ ಬೆಡ್ ಮತ್ತು ವಾರ್ಮರ್‌ನ್ನು ಇಡಲು ತೊಂದರೆಯಾಗಿರುವುದನ್ನು ಮಾನ್ಯ ಜಿಲ್ಲಾಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಪರಿಶೀಲಿಸಿ ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಸದರಿ ಕಾಮಗಾರಿಯ ನಿರ್ಮಾಣಕ್ಕೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನರವರು ರೂ.19.42 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯ ಬಗ್ಗೆ ಮಾನ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿ ಮಾನ್ಯ ಕಾರ್ಯದರ್ಶಿಗಳು ಹೊಸ ಆಸ್ಪತ್ರೆಯು ಪ್ರಾರಂಭವಾಗುತ್ತಿರುವುದರಿಂದ ಈ ಸೌಲಭ್ಯವನ್ನು ಹೊಸ ಆಸ್ಪತ್ರೆಯಲ್ಲಿ ಅಳವಡಿಸಿಕೊಳ್ಳುವುದು ಸೂಕ್ತವೆಂದು ಸೂಚಿಸಿ ಸದರಿ ಪ್ರಸ್ತಾವನೆಯನ್ನು ಕೈಬಿಡಲು ನಿರ್ದೇಶನ ನೀಡಿರುವುದರಿಂದ ಈ ಕಾಮಗಾರಿಯ ಕಡತವನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯಲ್ಲಿ ನಿರ್ದೇಶಕರಿಗೆ ಸೂಚಿಸಲಾಯಿತು. |
| 34 | ಹಿಮ್ಸ್ ಸಂಸ್ಥೆಯ ಬೋಧನ ಆಸ್ಪತ್ರೆಯಾದ 350 ರಿಂದ 750 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ಆಸ್ಪತ್ರೆಯ ಕಟ್ಟಡವನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಶ್ರೀ ಚಾಮರಾಜೇಂದ್ರ ಬೋಧನಾ ಆಸ್ಪತ್ರೆಯ 350 ರಿಂದ 750 ಹಾಸಿಗೆಗಳ ಸಂಖ್ಯೆಗೆ ಮೇಲ್ದರ್ಜೆಗೇರಿಸುವ ಹೊಸ ಅನೆಕ್ಸ್ ಕಟ್ಟಡದ ಕಾಮಗಾರಿಯನ್ನು KHSDRP ಇಲಾಖೆಯವರು ಪೂರ್ಣಗೊಳಿಸಿರುತ್ತಾರೆ. ಕಟ್ಟಡ ನಿರ್ಮಾಣದ ಗುತ್ತಿಗೆದಾರರು ಕಟ್ಟಡದ ಭದ್ರತಾ ಸೌಲಭ್ಯಗಳನ್ನು ಹಿಂಪಡೆಯುತ್ತಿರುವುದರಿಂದ ಹಾಗೂ ಸದರಿ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಬಿಲ್ ವೆಚ್ಚವನ್ನು ಸಂಸ್ಥೆಯಿಂದ ಪಾವತಿಸಬೇಕಾಗಿರುವುದರಿಂದ ಕೂಡಲೇ ಕಟ್ಟಡವನ್ನು ಸ್ವಾಧೀನಕ್ಕೆ ಪಡೆದುಕೊಂಡು ಭದ್ರತಾ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ವ್ಯವಸ್ಥೆ ಕಲ್ಪಿಸಿ ಬಾಕಿ ಇರುವ ವಿದ್ಯುತ್‌ಚ್ಛಕ್ತಿ ಬಿಲ್ ಬಾಬ್ತನ್ನು ಪಾವತಿಸುವಂತೆ HFW/KHSDRP/EE /DIV/MYS/AE-3/DH-Hassan/1248/2013-14, ದಿನಾಂಕ: 28–12–2013 , 20.02.2014 ರಂದು ಪತ್ರ ಬರೆದಿರುವುದನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು ವಿಷಯವನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಟೆಂಡರ್ ನಿಯಮಾನುಸಾರ ಗುತ್ತಿಗೆದಾರರು ಎಲ್ಲಾ ಕಾಮಗಾರಿಗಳು ಪೂರ್ಣ ಪ್ರಮಾಣದಲ್ಲಿ ನಿರ್ಮಿಸಿದ್ದಾರೆಯೇ ಎಂಬುದನ್ನು ಜಂಟಿಯಾಗಿ ಪರಿವೀಕ್ಷಣೆ ನಡೆಸಿ ವರದಿ ಪಡೆದುಕೊಂಡು ಕಟ್ಟಡಗಳನ್ನು ಹಸ್ತಾಂತರಕ್ಕೆ ಪಡೆದುಕೊಳ್ಳುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು. |
| 35 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಕಟ್ಟಡ, ಬಾಲಕ ಮತ್ತು ಬಾಲಕಿಯರ ವಸತಿ ನಿಲಯ ಹಾಗೂ ವೈದ್ಯರ ವಸತಿ ನಿಲಯಗಳ ಕಟ್ಟಡ ನಿರ್ವಹಣೆಯ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಕಟ್ಟಡ, ಬಾಲಕ ಮತ್ತು ಬಾಲಕಿಯರ ವಸತಿ ನಿಲಯ ಹಾಗೂ ವೈದ್ಯರ ವಸತಿ ನಿಲಯಗಳ ಕಟ್ಟಡಗಳ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಮೂಲಕ 20005–06ನೇ ಸಾಲಿನಲ್ಲಿ ಕಟ್ಟಡಗಳ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಹಂತ ಹಂತವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಲೋಕೋಪಯೋಗಿ ಇಲಾಖೆಯವರು ಎಲ್ಲಾ ಕಟ್ಟಡಗಳನ್ನು ಸಂಸ್ಥೆಯ ಅಧೀನಕ್ಕೆ ವಹಿಸಿರುತ್ತಾರೆ. ಈಗಾಗಲೇ ಕಟ್ಟಡದ ಕೆಲವು ಭಾಗಗಳು ಮಳೆಯ ನೀರಿನಿಂದ ಸೋರುತ್ತಿರುವುದು ಮತ್ತು ಬಣ್ಣವನ್ನು ಕಳೆದುಕೊಂಡಿರುವುದರಿಂದ ಸ್ವಚ್ಛತೆ ಮತ್ತು ಕಟ್ಟಡದ ಭದ್ರತಾ ಹಿತದೃಷ್ಟಿಯಿಂದ ಕಾಲಕಾಲಕ್ಕೆ ಕಟ್ಟಡಗಳ ನಿರ್ವಹಣೆಯ ಬಗ್ಗೆ ಗಮನಹರಿಸಬೇಕಾಗಿರುತ್ತದೆ ಎಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಈ ಕೆಲಸವನ್ನು ನಿಯಮನುಸಾರ ಲೋಕೋಪಯೋಗಿ ಇಲಾಖೆಯ ಮೂಲಕ ನಿರ್ವಹಿಸಬೇಕಾಗಿರುವುದರಿಂದ ಎಲ್ಲಾ ಕಟ್ಟಡಗಳ ರಿಪೇರಿ, ಬಣ್ಣ ಹಾಗೂ ಇತರೆ ವೆಚ್ಚಗಳಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಪಡೆದು ಆಡಳಿತಾತ್ಮಕ ಅನುಮೋದನೆ ಹಾಗೂ ಅನುದಾನದ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 36 | ಅ) ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಯುಜಿ ಮತ್ತು ಪಿಜಿ ಪುಸ್ತಕಗಳನ್ನು ಇ–ಟೆಂಡರ್ ಮೂಲಕ ಖರೀದಿಸುವ ಬಗ್ಗೆ.<br>ಆ) ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕತೆ ಇರುವ ನಿಯತಕಾಲಿಕೆಗಳನ್ನು GOC ಮೂಲಕ ಖರೀದಿಸಲು ಅನುಮತಿ ಬಗ್ಗೆ. | ಅ) ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಯುಜಿ ಮತ್ತು ಪಿಜಿ ಪುಸ್ತಕಗಳನ್ನು ಇ–ಟೆಂಡರ್ ಮೂಲಕ ಖರೀದಿಸುವ ಬಗ್ಗೆ ಮತ್ತು ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕತೆ ಇರುವ ನಿಯತಕಾಲಿಕೆಗಳನ್ನು GOC ಮೂಲಕ ಖರೀದಿಸುವ ಬಗ್ಗೆ ಚರ್ಚಿಸಲಾಯಿತು. ಸದರಿ ವಿಷಯವನ್ನು ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಂಡು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 37 | ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು | |
| 37(1) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹೊಸ ಬೋಧಕ ಆಸ್ಪತ್ರೆಯ ಕಟ್ಟಡ ಪ್ರಾರಂಭಕ್ಕೆ ಅಗತ್ಯವಿರುವ ಉಪಕರಣ ಮತ್ತುಪೀಠೋಪಕರಣಗಳನ್ನು KDLWS ಸಂಸ್ಥೆಯ ಮೂಲಕ ಇ-ಟೆಂಡರ್ ಕರೆಯುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹೊಸ ಬೋಧಕ ಆಸ್ಪತ್ರೆಗೆ ಅತಿ ಅವಶ್ಯಕವಿರುವ ಉಪಕರಣ ಮತ್ತು ಪೀಠೋಪಕರಣಗಳ ಖರೀದಿಯ ಪಟ್ಟಿಗೆ ಸರ್ಕಾರವು ಒಪ್ಪಿಗೆ ನೀಡಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 241 ಕೆವಿಎಂ 2012, ಬೆಂಗಳೂರು, ದಿನಾಂಕ: 12.03.2014ರಂದು ರೂ.1,000.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನವನ್ನು ಬಿಡುಗಡೆ ಮಾಡಿರುವುದರಿಂದ ಅತಿ ಅವಶ್ಯಕವಿರುವ ಉಪಕರಣ ಮತ್ತು ಪೀಠೋಪಕರಣಗಳನ್ನು KDLWS ಸಂಸ್ಥೆಯ ಮೂಲಕ ಇ-ಟೆಂಡರ್ ಮೂಲಕ ಕರೆದು ಖರೀದಿಸುವ ಪ್ರಸ್ತಾವನೆಯನ್ನು ಒಪ್ಪಿ ಅಂಗೀಕರಿಸಲಾಯಿತು. |
| 37(2) | SCP/TSP ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಹೊಸ ಬೋಧಕ ಆಸ್ಪತ್ರೆಗೆ ಅಗತ್ಯವಿರುವ ಉಪಕರಣ ಮತ್ತುಪೀಠೋಪಕರಣಗಳನ್ನು ಖರೀದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ SCP ಯೋಜನೆಯಡಿಯಲ್ಲಿ 2011-12 ಮತ್ತು 2013-14ನೇ ಸಾಲಿನಲ್ಲಿ ರೂ.436.50 ಲಕ್ಷಗಳು ಅನುದಾನ ಬಿಡುಗಡೆಯಾಗಿದ್ದು, ರೂ.98.43 ಲಕ್ಷಗಳ ಖರ್ಚಾಗಿದ್ದು ರೂ. 338.07 ಲಕ್ಷಗಳು ಉಳಿದಿರುತ್ತದೆ. ಮತ್ತು TSP ಯೋಜನೆಯಡಿಯಲ್ಲಿ 2011-12 ಮತ್ತು 2013-14ನೇ ಸಾಲಿನಲ್ಲಿ ರೂ.234.33 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಇಲ್ಲಿಯವರೆಗೆ ರೂ.24.96 ಲಕ್ಷಗಳು ಖರ್ಚಾಗಿದ್ದು ರೂ. 209.37 ಲಕ್ಷಗಳು ಉಳಿದಿರುತ್ತದೆ. SCP ಮತ್ತು TSP ಈ ಎರಡು ಲೆಕ್ಕ ಶೀರ್ಷಿಕೆಯಡಿಯಲ್ಲಿ ಒಟ್ಟು ರೂ.547.44 ಲಕ್ಷ ರೂಗಳು ಲಭ್ಯವಿದ್ದು ಈ ಬಾಬ್ತನ್ನು ಹೊಸ ಆಸ್ಪತ್ರೆ ಕಟ್ಟಡದ ಪ್ರಾರಂಭಕ್ಕೆ ಸಂಬಂಧಿಸಿದಂತೆ ಅತಿ ಅವಶ್ಯಕ ಕಾಮಗಾರಿಗಳಲ್ಲಿ ಒಂದಾದ ತ್ಯಾಜ್ಯ ನೀರು ಶುದ್ಧೀಕರಣ ಘಟಕ (STP-ETP) ಕಾಮಗಾರಿಗೆ ಪಾವತಿಸಬೇಕಾಗಿರುವ ಉಳಿಕೆ ಬಾಬ್ತು ರೂ. 115.00 ಲಕ್ಷಗಳನ್ನು ಉಪಯೋಗಿಸಿಕೊಳ್ಳಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯುವಂತೆ ತೀರ್ಮಾನಿಸಲಾಯಿತು. |
| 37(3) | ಮೆ.ಸಾಯಿ ಸೆಕ್ಯೂರಿಟಿ ಸರ್ವೀಸಸ್ ಇವರಿಗೆ ಪಾವತಿಸಲು ಬಾಕಿ ಇರುವ ಬಿಲ್ ಬಗ್ಗೆ. | ಮೆ.ಸಾಯಿ ಸೆಕ್ಯೂರಿಟಿ ಏಜೆನ್ಸಿರವರಿಗೆ ಮಾರ್ಚ್-2012ರಿಂದ ಮಾರ್ಚ್ 2013ರವರೆಗೆ ಒಟ್ಟು 13 ತಿಂಗಳ ಬಿಲ್‌ಗಳಿಂದ ಪಾವತಿಸಬೇಕಾಗಿರುವ ಮೊತ್ತ ರೂ.2,12,47,336/-ಗಳು ಇದರಲ್ಲಿ ಇ.ಪಿ.ಎಫ್.ವಂತಿಕೆಯ ಬಾಕಿ ಮೊತ್ತ ಮತ್ತು ಇತರೆ ಬಾಬ್ತಿನ ಮೊತ್ತವಾದ ಒಟ್ಟು ರೂ. 1,12,47,336/-ಗಳನ್ನು ಕಳೆದು ಬಾಕಿ ಇರುವ ರೂ.1,00,00,000/-(ರೂ.ಒಂದು ಕೋಟಿ)ಗಳನ್ನು ಮೆ.ಸಾಯಿ ಸೆಕ್ಯೂರಿಟಿ ಏಜೆನ್ಸಿರವರಿಗೆ ಪಾವತಿಸುವ ಬಗ್ಗೆ ಚರ್ಚಿಸಲಾಯಿತು. ಸದರಿ ಪ್ರಕರಣದಲ್ಲಿ ಟೆಂಡರ್ ಅವಧಿಯನ್ನು ಮೀರಿ ಸದರಿ ಏಜೆನ್ಸಿಯು ಕಾರ್ಯನಿರ್ವಹಿಸಲು ಕಾರಣವಾದ ಅಂಶಗಳನ್ನು ಸಭೆಗೆ ಮನವರಿಕೆ ಮಾಡಿಕೊಡಲಾಯಿತು. ಸದರಿ ಏಜೆನ್ಸಿಯ ಟೆಂಡರ್ ಅವಧಿ, ಮೀರಿರುವ ಅವಧಿ ಮಾರ್ಚ್ 2012 ರಿಂದ ಮಾರ್ಚ್2013ರವರೆಗೆ ಸರ್ಕಾರದ ಹಂತದಲ್ಲಿ 4ಜಿ ವಿನಾಯಿತಿ ಅನುಮೋದನೆಯಾಗುವುದು ಕಡ್ಡಾಯ ಅವಶ್ಯಕತೆ ಇರುತ್ತದೆ ಎಂದು ಆರ್ಥಿಕ ಇಲಾಖೆಯ ಅಧಿಕಾರಿಗಳು ಸಭೆಯ ಗಮನಕ್ಕೆ ತರಲಾಗಿ, ಈ ಬಗ್ಗೆ ಸರ್ಕಾರದ ಹಂತದಲ್ಲಿ ಪಾವತಿಗೆ ಅನುಮತಿ ದೊರೆತ ನಂತರ ಪಾವತಿಗೆ ಕ್ರಮವಹಿಸುವುದೆಂದು ತೀರ್ಮಾನಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
| --- | --- | --- |
| 37(4) | ಸಂಸ್ಥೆಯ ವಸತಿ ನಿಲಯಗಳಲ್ಲಿ ವಾಸಿಸುತ್ತಿರುವ ಗೃಹವೈದ್ಯ ವಿದ್ಯಾರ್ಥಿಗಳ ವಸತಿನಿಲಯಕ್ಕೆ ಬಾಡಿಗೆ ನಿಗದಿಪಡಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಗೃಹ ವೈದ್ಯರುಗಳಾಗಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಮಾಸಿಕ ರೂ.15,000/-ಗಳನ್ನು ಸ್ಟೈಫಂಡರಿಯಾಗಿ ಪಾವತಿಸುತ್ತಿದ್ದು, ವಸತಿ ನಿಲಯದಲ್ಲಿ ವಾಸಮಾಡುವಂತಹ ಗೃಹ ವೈದ್ಯರುಗಳಿಗೆ ಮಾರ್ಚ್-2014 ರಿಂದ ಜಾರಿಗೆ ಬರುವಂತೆ ವಸತಿನಿಲಯದ ಬಾಡಿಗೆಯನ್ನು ರೂ.1,000-00ಗಳಿಗೆ ಪರಿಷ್ಕರಿಸುವದನ್ನು ಒಪ್ಪಿ ಅನುಮೋದಿಸಲಾಯಿತು. ಮತ್ತು ವಸತಿನಿಲಯದ ಬಾಡಿಗೆಯನ್ನು ಗೃಹ ವೈದ್ಯರಿಗೆ ಪಾವತಿಸುವ ಸ್ಟೈಫಂಡರಿ ಬಾಬ್ತಿನಲ್ಲಿ ಕಡಿತಗೊಳಿಸುವುದೆಂದು ತೀರ್ಮಾನಿಸಲಾಯಿತು. |
| 37(5) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಟ್ಟಡಗಳ ಆಸ್ತಿ ತೆರಿಗೆಯನ್ನು ಪಾವತಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನಕ್ಕೆ ಒಳಪಡುವ ವೈದ್ಯರ ವಸತಿ ಗೃಹಗಳ ಆಸ್ತಿ ತೆರಿಗೆ 2005-06 ರಿಂದ 2013-14ನೇ ಸಾಲಿನವರೆಗೆ ರೂ.19,59,270-00ಗಳು ಮತ್ತು ದಾದಿಯವರ ವಸತಿ ಗೃಹಗಳ ಆಸ್ತಿ ತೆರೆಗೆ 2002-03ರಿಂದ 2013-14ನೇ ಸಾಲಿನವರೆಗೆ ರೂ.4,40,624-00 ಒಟ್ಟು ರೂ.23,99,894-00 ಗಳನ್ನು ಪಾವತಿಸುವಂತೆ ಏಕಕಾಲದಲ್ಲಿ ಬಿಲ್ ಸಲ್ಲಿಸಿರವುದರ ಬಗ್ಗೆ ಚರ್ಚಿಸಲಾಯಿತು ಸದರಿ ಬಾಬ್ತಿನ ಪಾವತಿ ಬಗ್ಗೆ ಸಂಪೂರ್ಣ ವಿನಾಯಿತಿ ಕೋರಿ ಸರ್ಕಾರದಿಂದ ಅನುಮತಿ ಪಡೆಯುವುದು ಸೂಕ್ತವೆಂದು ಚರ್ಚಿಸಿ ಸದರಿ ವಿಷಯವನ್ನು ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 37(6) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿ ಬರುವ ಕಟ್ಟಡಗಳಿಗೆ ನೀರು ಸರಬರಾಜಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿ ಬರುವ ಕಟ್ಟಡಗಳಿಗೆ ನೀರು ಸರಬರಾಜಿನ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ಪೌರಾಯುಕ್ತರು, ನಗರ ಸಭೆ, ಹಾಸನ ಇವರು ದಿನಾಂಕ:27.01.2014 ರಂದು ಈ ಕಛೇರಿಗೆ ಪತ್ರ ಬರೆದು ದಿನಾಂಕ: 01.07.2008 ರಿಂದ 31.04.2014ರವರೆಗೆ ಒಟ್ಟು ರೂ.2,73,65,000/- ಗಳನ್ನು ಪಾವತಿ ಮಾಡುವಂತೆ ಏಕ ಕಾಲದಲ್ಲಿ ಸಂಸ್ಥೆಗೆ ಬಿಲ್ ಸಲ್ಲಿಸಿ ಪ್ರತಿಯನ್ನು ಸರ್ಕಾರದ ಕಾರ್ಯದರ್ಶಿಗಳಿಗೆ ಕಳುಹಿಸಿರುತ್ತಾರೆ. ನಗರ ಸಭೆಗೆ ಪಾವತಿಸಬೇಕಾದ ತೆರಿಗೆಯನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸರ್ಕಾರದಿಂದ ಪತ್ರ ಬಂದಿರುವುದನ್ನು ಚರ್ಚಿಸಲಾಯಿತು ಸದರಿ ಬಾಬ್ತಿನ ಪಾವತಿ ಬಗ್ಗೆ ಸಂಪೂರ್ಣ ವಿನಾಯಿತಿ ಕೋರಿ ಸರ್ಕಾರದಿಂದ ಅನುಮತಿ ಪಡೆಯುವುದು ಸೂಕ್ತವೆಂದು ಚರ್ಚಿಸಿ ಸದರಿ ವಿಷಯವನ್ನು ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 37(7) | ಹೊರಗುತ್ತಿಗ ಸಂಪನ್ಮೂಲ ಏಜೆನ್ಸಿ ಮುಖಾಂತರ ತೆಗೆದುಕೊಂಡಿರುವ ಪ್ಲಂಬರ್,ಎಲೆಕ್ಟ್ರಿಷಿಯನ್ ಮತ್ತು ಡ್ರೈವರ್ ಗಳಿಗೆ ಕಾರ್ಮಿಕ ಇಲಾಖೆಯವರುನಿಗದಿ ಪಡಿಸಿರುವ ದರದ ಜೊತೆಗೆ ಹೆಚ್ಚುವರಿಯಾಗಿವೇತನಪಾವತಿಸುವಬಗ್ಗೆ. | ಈ ಸಂಸ್ಥೆಗೆ 2014-15ನೇ ಸಾಲಿಗೆ ಇ-ಟೆಂಡರ್ ಮುಖಾಂತರ ಹೊರಸಂಪನ್ಮೂಲ ಏಜೆನ್ಸಿಯಿಂದ ಪ್ಲಂಬರ್, ಎಲೆಕ್ಟ್ರೀಷಿಯನ್ ಮತ್ತು ಡ್ರೈವರ್ ಸಿಬ್ಬಂದಿಗಳನ್ನು ಪಡೆಯಲಾಗಿದೆ. ಆದರೆ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ದರದಲ್ಲಿ ಸದರಿ ಕಾರ್ಮಿಕರು ಕೆಲಸ ನಿರ್ವಹಿಸಲು ಒಪ್ಪದಿರುವುದರಿಂದ ಹೆಚ್ಚುವರಿಯಾಗಿ ವೇತನ ಪಾವತಿಸುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ವೇತನವನ್ನು ಆಡಳಿತ ಮಂಡಳಿ ಸಭೆಯಲ್ಲಿ ಸಾಧ್ಯವಿಲ್ಲವೆಂದು ತೀರ್ಮಾನಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 37(8) | ಡಾ. ಪ್ರಕಾಶ್.ಬಿ.ಎಸ್., ಪ್ರಾಧ್ಯಾಪಕರು, ಅಂಗರಚನಾಶಾಸ್ತ್ರ ವಿಭಾಗ, ಹಿಮ್ಸ್, ಹಾಸನ ಇವರನ್ನು ಕ್ರೋಢೀಕೃತ ವೇತನದಡಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ. | ಸಂಸ್ಥೆಯ ಅಂಗ ರಚನಾಶಾಸ್ತ್ರ ವಿಭಾಗಕ್ಕೆ ಹಲವಾರು ಬಾರಿ ನೇರ ಸಂದರ್ಶನದ ಮೂಲಕ ಪ್ರಾಧ್ಯಾಪಕರ ಹುದ್ದೆಯನ್ನು ಭರ್ತಿ ಮಾಡಲು ನೇರ ಸಂದರ್ಶನಕ್ಕಾಗಿ ಪ್ರಕಟಣೆ ಮಾಡಲಾಗಿದ್ದು, ನೇರ ಸಂದರ್ಶನದಲ್ಲಿ ಆಯ್ಕೆ ಮಾಡಿದ್ದ ಪಟ್ಟಿಯನ್ನು ತಾಂತ್ರಿಕ ಕಾರಣಗಳಿಂದ ರದ್ದುಪಡಿಸಲಾಗಿರುತ್ತದೆ. ವಿಭಾಗದಲ್ಲಿ ಸಿಬ್ಬಂದಿಗಳ ಕೊರತೆಯಿಂದಾಗಿ ಹಾಲಿ ಸ್ನಾತಕೋತ್ತರ ಪದವಿ ಪಡೆಯಲು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾನ್ಯತೆ ದೊರೆಯಲು ಅಡಚಣೆಯಾಗಿರುತ್ತದೆ. ಸ್ನಾತ್ತಕೋತ್ತರ ಪದವಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಎಮ್.ಸಿ.ಐ. ನವದೆಹಲಿ ಇವರು ಪರಿವೀಕ್ಷಣೆಗೆ ಆಗಮಿಸುತ್ತಿರುವುದರಿಂದ ಪ್ರಾಧ್ಯಾಪಕರ ಹುದ್ದೆಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡುವವರೆಗೂ ಡಾ. ಪ್ರಕಾಶ್.ಬಿ.ಎಸ್. ಎಂಬಿಬಿಎಸ್., ಎಂ.ಡಿ., ಅಂಗರಚನಾಶಾಸ್ತ್ರ ಇವರಿಗೆ ತಾತ್ಕಾಲಿವಾಗಿ ಪ್ರಾಧ್ಯಾಪಕರ ವೇತನ ಶ್ರೇಣಿ ರೂ.37400-67000+AGP 1000 ದಲ್ಲಿ ಕನಿಷ್ಠ ವೇತನ ದಡಿ (-)100/- ಆಡಳಿತ ಮಂಡಳಿ ಅನುಮೋದನೆ ಷರತ್ತಿಗೊಳಪಟ್ಟು ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ ಆಕುಕ 321 ಕೆಎಂ 2013, ದಿನಾಂಕ:21.03.2014 ರಲ್ಲಿ ಸರ್ಕಾರದಿಂದ ಅನುಮತಿಯೊಂದಿಗೆ ಸದರಿ ವೈದ್ಯರನ್ನು ಪ್ರಾಧ್ಯಾಪಕರ ಹುದ್ದೆಗೆ ನೇಮಕ ಮಾಡಿಕೊಂಡಿರುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸರ್ಕಾರದ ಅನುಮತಿಯೊಂದಿಗೆ ಅನಾಟಮಿ ವಿಭಾಗಕ್ಕೆ ಕ್ರೂಢೀಕೃತ ವೇತನದೊಂದಿಗೆ ತಾತ್ಕಾಲಿಕವಾಗಿ ಮಾಡಿಕೊಂಡಿರುವ ಪ್ರಾಧ್ಯಾಪಕರ ನೇಮಕಾತಿಯನ್ನು ಅನುಮೋದಿಸಲಾಯಿತು. |
| 37(9) | ಡಾ. ಭಾರತಿ.ಜಿ., ಹಿರಿಯ ಸ್ಥಾನಿಯ ವೈದ್ಯರು ಮನಸಿಕ ರೋಗ ಚಿಕಿತ್ಸಾ ವಿಭಾಗ ಇವರಿಗೆ ಹಿರಿಯ ಸ್ಥಾನಿಯ ವೈದ್ಯರ ಹುದ್ದೆಯಿಂದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ. | ಡಾ. ಭಾರತಿ.ಜಿ. ರವರು ದಿನಾಂಕ:02.04.2009 ರಂದು ಹಿರಿಯ ಸ್ಥಾನಿಯ ವೈದ್ಯರಾಗಿ ಮನಸಿಕ ರೋಗ ಚಿಕಿತ್ಸಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಮಾನಸಿಕ ರೋಗ ತಜ್ಞ ವಿಭಾಗದಲ್ಲಿ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರು ಈ ಎರಡೂ ಹುದ್ದೆಗಳೂ ಖಾಲಿ ಇರುತ್ತದೆ. ಎಂ.ಸಿ.ಐ. ನಿಯಮಾವಳಿಗಳ ಪ್ರಕಾರ ಮಾನಸಿಕ ರೋಗ ತಜ್ಞ ವಿಭಾಗಕ್ಕೆ ಮಂಜೂರಾಗಿರುವ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು ಈ ಎರಡೂ ಹುದ್ದೆಗಳು ಪ್ರಸ್ತುತ ಖಾಲಿ ಇರುವುದರಿಂದ ವಿದ್ಯಾರ್ಥಿಗಳ ಬೋಧನೆಗೆ ತೊಂದರೆ ಯಾಗಿರುತ್ತದೆ. ಹಾಲಿ ಹಿರಿಯ ಸ್ಥಾನೀಯ ವೈದ್ಯರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ಭಾರತಿರವರೇ ಈ ವಿಭಾಗದ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುತ್ತಾರೆ. ಡಾ. ಭಾರತಿ.ಜಿ.ರವರಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಲು ದಿನಾಂಕ:18.11.2013ರಂದು ನಡೆದ ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯ ಮುಂದೆ ಮಂಡಿಸಲಾಗಿರುತ್ತದೆ. ಹೈದರಾಬಾದ್-ಕರ್ನಾಟಕಕ್ಕೆ ಭಾರತ ಸಂವಿಧಾನ ಅನುಚ್ಛೇಧ 371 (ಜೆ) ಪ್ರಕಾರ ಸರ್ಕಾರವು ವಿಶೇಷ ಮೀಸಲಾತಿ ನೀಡುವ ವಿಷಯದಲ್ಲಿ ನಿಯಮಗಳನ್ನು ರೂಪಿಸುತ್ತಿದ್ದು, ಈ ನಿಯಮಗಳನ್ನೆಲ್ಲಾ ರೂಪಿಸುವವರೆಗೂ ನೇಮಕಾತಿ ಮಾಡುವಂತಹ ಹುದ್ದೆಗಳು ಅಂದರೆ ಸಹಾಯಕ ಪ್ರಾಧ್ಯಾಪಕರು, ಹಿರಿಯ ಸ್ಥಾನಿಯ ವೈದ್ಯರು ಹಾಗೂ ಕಿರಿಯ ಸ್ಥಾನಿಯ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿರುವುದಿಲ್ಲವಾದ್ದರಿಂದ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಡಾ. ಭಾರತಿ.ಜಿ., ಹಿರಿಯ ಸ್ಥಾನಿಯ ವೈದ್ಯರು, ಮಾನಸಿಕ ರೋಗ ಚಿಕಿತ್ಸಾ ವಿಭಾಗ ಇವರನ್ನು ಹಿರಿಯ ಸ್ಥಾನಿಯ ವೈದ್ಯರ ಹುದ್ದೆಯಿಂದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವ ವಿಷಯವನ್ನು ಕೈಬಿಡಲು ಸಭೆಯಲ್ಲಿ ತೀರ್ಮಾನ ಕೈಗೊಂಡಿರುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.<br>ಡಾ. ಭಾರತಿರವರು ಬಳ್ಳಾರಿ ಜಿಲ್ಲೆಯಲ್ಲಿ ಜನಿಸಿದ್ದು 371 (ಜೆ)ನೇ ಅನುಚ್ಛೇದದ ಪ್ರಕಾರ ಹೈದರಾಬಾದ್-ಕರ್ನಾಟಕ ಮೀಲಾತಿಗೆ ಒಳಪಡುತ್ತಾರೆ. ಮತ್ತು ಎಂ.ಸಿ.ಐ. ನಿಯಮಾವಳಿಗಳ ಪ್ರಕಾರ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಹರಾಗಿರುವುದರಿಂದ ಸದರಿ ವೈದ್ಯರಿಗೆ ಹಿರಿಯ ಸ್ಥಾನಿಯ ವೈದ್ಯರಿಂದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ ಸಂಸ್ಥೆಯ ಡಿ.ಪಿ.ಸಿ ಸಭೆಯಲ್ಲಿ ಮಂಡಿಸಿ ತೀರ್ಮಾನ ಕೈಗೊಂಡು ನಂತರ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆಯುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 37(10) | ಡಾ.ಬಿಂದು.ಸಿ.ಬಿ.,ಡಾ.ಹಾಲೇಶ್.ಬಿ.ಆರ್. ಸಹಾಯಕ ಪ್ರಾಧ್ಯಾಪಕರು ಇವರುಗಳಿಗೆ ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಹಾಯಕ ಪ್ರಾಧ್ಯಪಕರುಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ.ಬಿಂದು.ಸಿ.ಬಿ., ಮತ್ತು ಡಾ.ಹಾಲೇಶ್.ಬಿ.ಆರ್. ಇವರುಗಳಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ. ಸಂಸ್ಥೆಯ ಡಿ.ಪಿ.ಸಿ ಸಭೆಯಲ್ಲಿ ಮಂಡಿಸಿ ತೀರ್ಮಾನ ಕೈಗೊಂಡು ನಂತರ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆಯುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 37(11) | ಹಿಮ್ಸ್, ಹಾಸನ ಸಂಸ್ಥೆಯ ನ್ಯಾಯವೈದ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ.ಪ್ರವೀಣ್.ಕುಮಾರ್. ಈ. ಇನಾಮದಾರ್ ಇವರು ನೀಡಿರುವ ಸುಳ್ಳು ಸೇವಾನುಭವದ ಬಗ್ಗೆ. | ಡಾ.ಪ್ರವೀಣ್.ಕುಮಾರ್.ಈ.ಇನಾಮದಾರ್, ಪ್ರಾಧ್ಯಾಪಕರು, ನ್ಯಾಯವೈದ್ಯಶಾಸ್ತ್ರ ಇವರು ಸೇವಾನುಭವ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಪ್ರಾಧ್ಯಾಪಕರ ಹುದ್ದೆಗೆ ಈ ಸಂಸ್ಥೆಯಲ್ಲಿ ನೇಮಕಾತಿ ಹೊಂದಿದ್ದಾರೆಂದು ದೂರು ನೀಡಿರುವುದರ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ:ಅಕುಕ 301 ಕೆವಿಎಂ 2013, ದಿನಾಂಕ:06.12.2013 ರ ಪತ್ರದ ಬಗ್ಗೆ ಚರ್ಚಿಸಲಾಯಿತು. ಸದರಿಯವರ ವಿಷಯವನ್ನು ಸಂಸ್ಥೆಯ ಡಿ.ಪಿ.ಸಿ ಸಭೆಯಲ್ಲಿ ಮಂಡಿಸಿ ತೀರ್ಮಾನ ಕೈಗೊಂಡು ನಂತರ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 37(12) | ಡಾ. ರಾಜಣ್ಣ.ಬಿ., ಸಹ ಪ್ರಾಧ್ಯಾಪಕರು, ಶಸ್ತ್ರಚಿಕಿತ್ಸಾ ವಿಭಾಗ, ಹಿಮ್ಸ್, ಹಾಸನ ಇವರನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಯುರಾಲಜಿ ವಿಭಾಗಕ್ಕೆ ವರ್ಗಾವಣೆ ಮಾಡುವ ಬಗ್ಗೆ. | ಡಾ. ರಾಜಣ್ಣ.ಬಿ., ಸಹ ಪ್ರಾಧ್ಯಾಪಕರು, ಶಸ್ತ್ರಚಿಕಿತ್ಸಾ ವಿಭಾಗ, ಹಿಮ್ಸ್, ಹಾಸನ ಇವರನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಯುರಾಲಜಿ ವಿಭಾಗಕ್ಕೆ ವರ್ಗಾವಣೆ ಮಾಡುವುದರಿಂದ ಹಿಮ್ಸ್ ಸಂಸ್ಥೆಯ ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ಸಿಬ್ಬಂದಿ ಕೊರತೆಯಾವುದರೊಂದಿಗೆ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯಾಗುವುದೆಂದು ಪರಿಗಣಿಸಿ ಸದರಿಯವರನ್ನು ವರ್ಗಾವಣೆ ಮಾಡಲು ಸಾಧ್ಯವಿಲ್ಲವೆಂದು ತೀರ್ಮಾನಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 37(13) | ಡಾ.ರವಿಕುಮಾರ್. ಬಿ.ಸಿ., ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು ಮತ್ತು ಡಾ. ಸುರೇಶ್.ಎಂ.ಆರ್. ಇವರುಗಳು ಮಾಡಿರುವ ಆರೋಪ ಹಾಗೂ ಪ್ರತ್ಯಾರೋಪಗಳ ಬಗ್ಗೆ. | ಡಾ. ರವಿಕುಮಾರ್.ಬಿ.ಸಿ., ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು ಮತ್ತು ಡಾ.ಸುರೇಶ್.ಎಂ.ಆರ್., ಸಹಾಯಕ ಪ್ರಾಧ್ಯಾಪಕರು ಇವರ ಕಡತದ ಬಗ್ಗೆ ಕೆಲವು ಮಾಹಿತಿಗಳು ಇನ್ನೂ ಸುಳ್ಯ ಮೆಡಿಕಲ್ ಕಾಲೇಜಿನಿಂದ ಬಾರದೆ ಇರುವುದರಿಂದ ಅವುಗಳನ್ನು ತರಿಸಿ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು. |
| 37(14) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕ್ಯಾನ್ಸರ್ ವಿಭಾಗದ ರೇಡಿಯೋಥೆರಪಿಯಂತ್ರಕ್ಕೆ AMC ಮಾಡಲು M/s. Panacea Medical Technologies Bangalore ಸಲ್ಲಿಸಿರುವ ಬಿಲ್ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನದ ಕ್ಯಾನ್ಸರ್ ರೇಡಿಯೋ ಥೆರಪಿ ವಿಭಾಗದಲ್ಲಿರುವ Bhabhatron–II ರೇಡಿಯೋಥೆರಪಿ ಟೆಲಿಕೊಬಾಲ್ಟ್ ಮಿಷನನ್ನು (AMC) ಮಾಡುವ ಸಲುವಾಗಿ M/s. Panacea Medical Technologies, Bangalore 3 ವರ್ಷಗಳ ಅವಧಿಗೆ ಸಲ್ಲಿಸಿರುವ ಒಟ್ಟು ಎ.ಎಮ್.ಸಿ. ಬಾಬ್ತು 12, 27,308.00 ರೂಗಳ ಪಾವತಿ ಬಗ್ಗೆ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಂಡು ನಂತರ ಸದರಿ ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 37(15) | ಡಾ.ಪ್ರವೀಣ್‌ಕುಮಾರ್.ಈ.ಇನಾಮದಾರ್ ಮತ್ತು ಡಾ. ಸುಧಾ. ಟಿ.ಆರ್. ಪ್ರಾಧ್ಯಾಪಕರು, ಹಿಮ್ಸ್, ಹಾಸನ ಇವರುಗಳ ಖಾಯಂ ಪೂರ್ವ ಸೇವಾವಧಿಯನ್ನು ಘೋಷಿಸುವ ಬಗ್ಗೆ. | ಅ)ಡಾ. ಪ್ರವೀಣ್ ಕುಮಾರ್ ಈ ಇನಾಮದಾರ ಪ್ರಾಧ್ಯಾಪಕರು, ನ್ಯಾಯ ವೈದ್ಯ ಶಾಸ್ತ್ರ ವಿಭಾಗ ಮತ್ತು ಡಾ. ಟಿ.ಆರ್. ಸುಧಾ, ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗರವರ ಖಾಯಂ ಪೂರ್ವ ಸೇವಾವಧಿ ಘೋಷಣೆಯ ಬಗ್ಗೆ ಚರ್ಚಿಸಲಾಯಿತು. ಡಾ. ಸುಧಾ.ಟಿ.ಆರ್. ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗ ಇವರ ಇಲಾಖಾ ವಿಚಾರಣಾ ವರದಿ ಬಂದ ನಂತರ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸುವುದೆಂದು ಮತ್ತು ಡಾ.ಪ್ರವೀಣ್‌ಕುಮಾರ್. ಈ.ಇನಾಮದಾರ್ ಪ್ರಾಧ್ಯಾಪಕರು, ನ್ಯಾಯ ವೈದ್ಯ ಶಾಸ್ತ್ರ ವಿಭಾಗ ಇವರ ಸುಳ್ಳು ಪ್ರಮಾಣ ಪತ್ರದ ಬಗ್ಗೆ ಮುಂಬಡ್ತಿ ಪರಿಶೀಲನಾ ಸಭೆಯ ಮುಂದೆ ಮಂಡಿಸಿ ತೀರ್ಮಾನ ಕೈಗೊಂಡು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸುವಂತೆ ಕ್ರಮ ಕೈಗೊಳ್ಳಲು ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 37(16) | ಡಾ.ವೀಣಾ ಹೆಚ್.ಸಿ. ಖಾಯಂ ಬೋಧಕರು, ಶರೀರ ಕ್ರಿಯಾ ಶಾಸ್ತ್ರ ವಿಭಾಗ, ಇವರ ನೇಮಕಾತಿಯನ್ನು ಅನುಮೋದಿಸುವ ಬಗ್ಗೆ. | ಡಾ. ವೀಣಾ ಹೆಚ್.ಸಿರವರು ಉನ್ನತ ವ್ಯಾಸಂಗಕ್ಕಾಗಿ ನಿಯೋಜನೆಗೊಂಡು ದಿನಾಂಕ: 31–05–2011ರಂದು ಸಂಸ್ಥೆಯ ಕರ್ತವ್ಯದಿಂದ ಬಿಡುಗಡೆ ಹೊಂದಿ. ತಮ್ಮ ಉನ್ನತ ವ್ಯಾಸಂಗವನ್ನು ಮುಗಿಸಿ ದಿನಾಂಕ: 26–05–2014ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 37(17) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನದಲ್ಲಿ ನೇಮಕಗೊಂಡಿರುವ ಬೋಧಕ ಸಿಬ್ಬಂದಿಯವರ ಪರಿವೀಕ್ಷಣಾ ಅವಧಿಯನ್ನು (ಪ್ರೊಬೇಷನರಿ) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗದ ಬೋಧಕ ಹುದ್ದೆಗಳಿಗೆ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ವೈದ್ಯರುಗಳ ಖಾಯಂ ಪೂರ್ವ ಸೇವಾವಧಿ ಘೋಷಿಸಲು ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸರ್ಕಾರದ ಮಾನ್ಯ ಕಾರ್ಯದರ್ಶಿಗಳು (ವೈ.ಶಿ), ಬೆಂಗಳೂರು ಇವರು ಸೂಚಿಸಿರುತ್ತಾರೆ. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಘೋಷಿಸುವ ಬಗ್ಗೆ.</td><td>ಈ ಕೆಳಕಂಡ ಬೋಧಕ ಸಿಬ್ಬಂದಿಯವರು ಕೆ.ಸಿ.ಎಸ್.ಆರ್. ನಿಯಮಾವಳಿಗಳು ಹಾಗೂ ಸಂಸ್ಥೆಯ ಬೈಲಾ ಪ್ರಕಾರ 02 ವರ್ಷ ತೃಪ್ತಿಕರವಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಇವರು ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ. ಇವರುಗಳ ವಿರುದ್ಧ ಯಾವುದೇ ಇಲಾಖಾ ವಿಚಾರಣೆಗಳು ಬಾಕಿ ಇರುವುದಿಲ್ಲ ಹಾಗೂ ಇವರ ವಿರುದ್ಧ ಇಲಾಖಾ ವಿಚಾರಣೆ ತೆಗೆದುಕೊಳ್ಳುವ ಪ್ರಸ್ತಾವನೆ ಸಂಸ್ಥೆಯ ಮುಂದೆ ಇರುವುದಿಲ್ಲ. ಅದರಂತೆ ಸದರಿ ಬೋಧಕರು 02 ವರ್ಷ ಖಾಯಂ ಪೂರ್ವ ಸೇವಾವಧಿ ತೃಪ್ತಿಕರವಾಗಿ ಪೂರೈಸಿರುವುದರಿಂದ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು
<table>
<tr><th>ಕ್ರಮ ಸಂಖ್ಯೆ</th><th>ಬೋಧಕರ ಹೆಸರು</th><th>ಪದನಾಮ</th><th>ಸೇವೆಗೆ ಸೇರಿದ ದಿನಾಂಕ</th><th>ಖಾಯಂ ಪೂರ್ವ ಸೇವಾ ಅವಧಿ ಪೂರ್ಣಗೊಳಿಸಿದ ದಿನಾಂಕ</th></tr>
<tr><td>01</td><td>ಡಾ.ಸೈಯ್ಯದ್ ಸಲ್ತನತ್ ಅರಾ</td><td>ಹಿರಿಯಸ್ಥಾನಿಯ ವೈದ್ಯರು</td><td>01.10.2010</td><td>23.01.2014</td></tr>
<tr><td>02</td><td>ಡಾ.ವೀಣಾ ಹೆಚ್.ಸಿ.</td><td>ಖಾಯಂಬೋಧಕರು</td><td>11.08.2006</td><td>27.05.2014</td></tr>
</table></td></tr>
<tr><td>37(18)</td><td>ಲೋಹಿತ್.ಪಿ., ಸ್ಪೀಚ್‌ಥೆರಪಿಸ್ಟ್, ಹಿಮ್ಸ್ , ಹಾಸನ. ಇವರು ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಸಂಸ್ಥೆ, ಮೈಸೂರಿಗೆ ವರ್ಗಾವಣೆ ಕೋರಿರುವುದರ ಬಗ್ಗೆ.</td><td>ಲೋಹಿತ್.ಪಿ., ಸ್ಪೀಚ್‌ಥೆರಪಿಸ್ಟ್, ಹಿಮ್ಸ್ , ಹಾಸನ. ಇವರು ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಸಂಸ್ಥೆ, ಮೈಸೂರಿಗೆ ವರ್ಗಾವಣೆ ಕೋರಿರುವ ಮನವಿ ಪತ್ರ ಬಗ್ಗೆ ಚರ್ಚಿಸಿ ಸದರಿಯವರನ್ನು ವರ್ಗಾವಣೆ ಮಾಡುವುದರಿಂದ ಸಿಬ್ಬಂದಿ ಕೊರತೆ ಯೊಂದಿಗೆ ಸಂಸ್ಥೆಯ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ತೊಂದರೆಯಾವುದುದೆಂದು ಪರಿಗಣಿಸಿ ಸದರಿಯವರನ್ನು ಹಿಮ್ಸ್ ಸಂಸ್ಥೆಯಿಂದ ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಸಂಸ್ಥೆ, ಮೈಸೂರಿಗೆ ವರ್ಗಾವಣೆ ಮಾಡಲು ಸಾಧ್ಯವಿಲ್ಲವೆಂದು ತೀರ್ಮಾನಿಸಲಾಯಿತು.</td></tr>
<tr><td>37(19)</td><td>ಸಂಸ್ಥೆಯ ಅನಾಟಮಿ, ಫಿಜಿಯಾಲಜಿ ಬಯೋಕೆಮಿಸ್ಟ್ರಿ, ಫಾರ್ಮಕಾಲಜಿ ಮತ್ತು ಮೈಕ್ರೋಬಯಾಲಜಿ ವಿಭಾಗಗಳ ಮುಖ್ಯಸ್ಥರು/ ಪ್ರಾಧ್ಯಾಪಕರ ಹುದ್ದೆಗಳನ್ನು ಎಮ್.ಸಿ.ಐ. ನಿಯಮಾವಳಿಗಳ ಪ್ರಕಾರ ಬೇಸಿಕ್ ಮೆಡಿಕಲ್ ಡಿಗ್ರಿ ಹೊಂದಿರುವ ವರನ್ನೇ ಮಾತ್ರ ನೀಡಬೇಕಾಗಿದ್ದು ಹಾಲಿ ಸಂಸ್ಥೆಯಲ್ಲಿ ಮೇಲ್ಕಂಡ ವಿಭಾಗಗಳಿಗೆ</td><td>1998ರ ಮೆಡಿಕಲ್ ಇನ್ಸ್‌ಸ್ಟಿಟ್ಯೂಷನ್ಸ್ ರೆಗ್ಯೂಲೇಷನ್ಸ್ ಷೆಡ್ಯೂಲ್-1ರ ಅಡಿಯಲ್ಲಿ ಬೋಧಕ ಹುದ್ದೆಗಳ ನೇಮಕಾತಿಗಳಲ್ಲಿ ಕನಿಷ್ಠ ವಿದ್ಯಾರ್ಹತೆ ಪರಿಶೀಲಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸ ಬೇಕಾಗಿರುತ್ತದೆ.<br>ಅನಾಟಮಿ, ಫಿಜಿಯಾಲಜಿ ಬಯೋಕೆಮಿಸ್ಟ್ರಿ, ಫಾರ್ಮಕಾಲಜಿ ಮತ್ತು ಮೈಕ್ರೋಬಯಾಲಜಿ ವಿಭಾಗಗಳಲ್ಲಿ ವಿಭಾಗದ ಮುಖ್ಯಸ್ಥರು ಬೇಸಿಕ್ ಮೆಡಿಕಲ್ ವಿದ್ಯಾರ್ಹತೆ ಹೊಂದಿರುವವರೆ ಆಗಿರಬೇಕಾಗಿದ್ದು, ಅಂತಹ ವಿದ್ಯಾರ್ಹತೆ ಹೊಂದಿದವರ ಕೊರತೆ ಇದ್ದಲ್ಲಿ ಮಾತ್ರ ಎಮ್.ಸಿ.ಐ.ನಿಂದ ಅನುಮತಿ ಪಡೆದು ನಾನ್ ಮೆಡಿಕಲ್ ವಿದ್ಯಾರ್ಹತೆ ಹೊಂದಿದವರನ್ನು ಆಯ್ಕೆ ಮಾಡಬಹುದಾಗಿರುತ್ತದೆ.<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಮೇಲ್ಕಂಡ ವಿಭಾಗಗಳಿಗೆ ಒಂದೊಂದೇ ಪ್ರಾಧ್ಯಾಪಕರ</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | ಒಂದೊಂದೇ ಪ್ರಾಧ್ಯಾಪಕರ ಹುದ್ದೆ ಮಂಜೂರಾಗಿ- ರುವುದರಿಂದ ಆ ಹುದ್ದೆಗಳನ್ನು ಬೇಸಿಕ್ ಮೆಡಿಕಲ್ ಡಿಗ್ರಿ ಹೊಂದಿರುವವರನ್ನೇ ಮೀಸಲಿಡುವ ಬಗ್ಗೆ ಚರ್ಚೆ ಹಾಗೂ ತೀರ್ಮಾನ. | ಹುದ್ದೆ ಸರ್ಕಾರದಿಂದ ಮಂಜೂರಾಗಿದ್ದು, ಆ ಹುದ್ದೆಯೇ ವಿಭಾಗದ ಮುಖ್ಯಸ್ಥರು ಆಗಬೇಕಾಗಿರುವುದರಿಂದ ಈ ಹುದ್ದೆಯನ್ನು ನೇರ ನೇಮಕಾತಿ ಅಥವಾ ಮುಂಬಡ್ತಿ ಮೂಲಕ ಭರ್ತಿ ಮಾಡುವ ಸಂದರ್ಭದಲ್ಲಿ ಎಮ್.ಸಿ.ಐ. ನಿಯಮಾವಳಿ ಮತ್ತು ಬೈಲಾ ಪ್ರಕಾರ ಬೇಸಿಕ್ ಮೆಡಿಕಲ್ ಡಿಗ್ರಿ ಹೊಂದಿರುವವರನ್ನೇ ನೇಮಕ ಮಾಡಲು ಕ್ರಮ ಕೈಗೊಳ್ಳಬೇಕಾಗಿರುವುದರಿಂದ, ಸದರೀ ಹುದ್ದೆಗಳನ್ನು ಬೇಸಿಕ್ ಮೆಡಿಕಲ್ ಡಿಗ್ರಿ ಹೊಂದಿರುವವರನ್ನೇ ಮಾತ್ರ ಭರ್ತಿ ಮಾಡಲು ಮೀಸಲಿರಿಸಬೇಕಾಗಿರುವ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ. ಎಮ್.ಸಿ.ಐ. ಮತ್ತು ಸಂಸ್ಥೆಯ ಬೈಲಾ ನಿಯಮಗಳ ಪ್ರಕಾರ ಬೇಸಿಕ್ ಮೆಡಿಕಲ್ ಡಿಗ್ರಿ ಹೊಂದಿರುವವರನ್ನು ಮಾತ್ರ ವಿಷಯದಲ್ಲಿರುವ ವಿಭಾಗಗಳಿಗೆ ನೇರ ನೇಮಕಾತಿ ಅಥವಾ ಮುಂಬಡ್ತಿ ಮೂಲಕ ಭರ್ತಿ ಮಾಡಲು ತೀರ್ಮಾನಿಸಲಾಯಿತು. |

(ಡಾ. ಎನ್. ರಾಜೇಗೌಡ)
ನಿರ್ದೇಶಕರು,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

(ಶ್ರೀ .ಶಿವಶೈಲಂ.ಎನ್., ಭಾ.ಆ.ಸೇ.,)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ ಹಾಗೂ
ಉಪಾಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

(ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್)
ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.